ವೇದಾಂತಭಾರತೀ ಗ್ರಂಥಮಾಲೆಯ ಎಪ್ಪತ್ತೇಳನೆಯ ಕುಸುಮ

# ಪವಿತ್ರಪರಿವ್ರಜನ

## ಪ್ರವಾಸಕಥನ

ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಉತ್ತರಭಾರತ ಆಧ್ಯಾತ್ಮಿಕಯಾತ್ರೆ

ಲೇಖಕರು : ಡಾ॥ ಕೆ. ಅನಂತರಾಮು, ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರುವಿಶ್ವವಿದ್ಯಾನಿಲಯ, ಮೈಸೂರು

**ವೇದಾಂತಭಾರತೀ**

(ತುಮಕೂರು ವಿಶ್ವವಿದ್ಯಾಲಯದಿಂದ ಮಾನಿತ ಸಂಶೋಧನ ಸಂಸ್ಥೆ)

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ -571602

ಮೈಸೂರು ಜಿಲ್ಲೆ. ದೂ: 08223-262471

# ಪವಿತ್ರಪರಿವ್ರಜನ

**ಪ್ರವಾಸಕಥನ–** ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಉತ್ತರಭಾರತ ಆಧ್ಯಾತ್ಮಿಕಯಾತ್ರೆ

# Pavitraparivrajana

**Travelogue–** An account of the spiritual itinerancy of Sri Sri Shankarabharati Mahaswamiji in North India
Author: Dr. K. Anantharamu, Retd. Kannada Professor, University of Mysore, Mysore

ISBN : 978-93-85014-86-4

**©:** *Vedanta Bharati*

ಪ್ರಥಮಮುದ್ರಣ : ಮೇ 2023
ಪ್ರತಿಗಳು : 1000
ಪುಟಗಳು : 608
ಬೆಲೆ : ₹700
ಬಳಸಿದಕಾಗದ : 70ಜಿಎಸ್ ಎಂ. ಮ್ಯಾಪ್ಲಿತೋ
ಬಾಕ್ಸ್‌ಬೈಂಡಿಂಗ್
ಪ್ರಕಾಶಕರು : © ವೇದಾಂತಭಾರತಿ

First Print : May 2023
Copies : 1000
Pages : 608
Price : ₹700
Paper Used : 70GSM MapLitho
Box Binding

Publisher : Vedanta Bharati
(Recognized as Research Centre by Tumkur University)
Chandramouli Road, Krishnarajanagara - 571 602,
Mysore District. PH : 08223-262471

ಮುದ್ರಕರು : ಸ್ಪ್ಯಾನ್ ಪ್ರಿಂಟ್ ಬೆಂಗಳೂರು
Printer: Span Print Bangalore



॥ ಶ್ರೀ ಚತುರ್ಭುಜ ಪಟ್ಟಾಭಿರಾಮೋ ವಿಜಯತೇ ॥





# ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ–571 602 ಮೈಸೂರು ಜಿಲ್ಲೆ

---

ಶ್ರೀ ಶಂಕರಭಗವತ್ಪಾದರ ಉಪದೇಶಗಳನ್ನು ಸಾಮಾನ್ಯ ಜನರಿಗೆ ದೇಶಾದ್ಯಂತ ತಿಳಿಸುವ ದೃಷ್ಟಿಯಿಂದ ಸಂನ್ಯಾಸಿಗಳ ಸಂಪರ್ಕವನ್ನು ಮಾಡಬೇಕು, ಅವರನ್ನು ಈ ಕಾರ್ಯದಲ್ಲಿ ಜೋಡಿಸುವ ಪ್ರಯತ್ನವನ್ನು ಮಾಡಬೇಕು ಅನ್ನುವ ದೃಷ್ಟಿಯಿಂದ ಹರಿದ್ವಾರ ಕುಂಭಮೇಳದ ಸಂದರ್ಭದಲ್ಲಿ ಹರಿದ್ವಾರವೂ ಸೇರಿದಂತೆ ಉತ್ತರಭಾರತದ ಕೆಲವೊಂದು ಭಾಗಗಳಿಗೆ ಯಾತ್ರೆ ಮಾಡಲಾಯಿತು. ಈ ಸಂದರ್ಭ ಅನೇಕ ಘಟನೆಗಳನ್ನು ಮುಂದಿನ ವರಿಗೆ ಪ್ರೇರಣೆಯಾಗಲಿ ಅನ್ನುವುದಕ್ಕಾಗಿ ಡಾ॥ ಕೆ. ಅನಂತರಾಮು ಅವರು ಶುದ್ಧ ಕನ್ನಡ ಶೈಲಿಯಲ್ಲಿ ಕಾರ್ಯಕರ್ತರ ಅನುಭವಗಳನ್ನು ಸೇರಿಸಿ ಒಂದು ಪುಸ್ತಕವನ್ನು ರಚಿಸಿದ್ದಾರೆ. ಕನ್ನಡದ ಹೆಸರಾಂತ ವಿದ್ವಾಂಸರಾದ ಶ್ರೀಮಾನ್ ಅನಂತರಾಮು ಅವರು ರಚಿಸಿದ ಈ ಗ್ರಂಥ ಕನ್ನಡಿಗರನ್ನು ಓದಿಸಿಕೊಂಡು ಹೋಗುವುದು ನಿಶ್ಚಿತ. ಇದನ್ನು ಓದಿದ ಪ್ರತಿಯೊಬ್ಬ ನಿಗೂ ಕರ್ತವ್ಯದ ಅರಿವಾದರೆ ಗ್ರಂಥ ಸಾರ್ಥಕ. ಇದಕ್ಕಾಗಿ ಪರಿಶ್ರಮವನ್ನು ವಹಿಸಿದ ಶ್ರೀಮಾನ್ ಅನಂತರಾಮು ಅವರಿಗೆ ನಮ್ಮ ಆರಾಧ್ಯಮೂರ್ತಿ ಪೂರ್ಣಾನುಗ್ರಹವನ್ನೀಯಲಿ ಎಂದು ಪ್ರಾರ್ಥಿಸುತ್ತೇವೆ. ಪ್ರಕಾಶನಗೊಳಿಸುವಲ್ಲಿ ಪರಿಶ್ರಮವನ್ನು ವಹಿಸಿದ ಎಲ್ಲ ಕಾರ್ಯ ಕರ್ತರಿಗೆ ಅನುಗ್ರಹವಿಶೇಷವನ್ನು ಪ್ರಾರ್ಥಿಸುತ್ತೇವೆ.

ಶೋಭಕೃತ್ ಸಂ॥ದ ಚೈತ್ರ ಕೃಷ್ಣ ನವಮೀ<br>ಶುಕ್ರವಾರ, 14-4-2023

ನಾರಾಯಣಸ್ಮರಣಮ್



# ಮುನ್ನುಡಿ

ಭಾರತದೇಶದ ಅಧ್ಯಾತ್ಮಜ್ಞಾನಸಂಪತ್ತನ್ನು ವಿಶ್ವದಾದ್ಯಂತ ಮೊದಲಿಗೆ ಹಂಚಿಕೊಟ್ಟ ಸರ್ವೋತ್ಕೃಷ್ಟ ಜ್ಞಾನಸಮುದ್ರವೇ ವೇದವಾಙ್ಮಯ. ನಂತರ ರಾಮಾಯಣ, ಮಹಾಭಾರತ ಪುರಾಣಗಳು ದರ್ಶನಗಳು ಕಾವ್ಯಾದಿ ವಿವಿಧ ಜ್ಞಾನಪ್ರಕಾರಗಳು ವೇದೋಕ್ತವಾದ ಅಮೂಲ್ಯವಾದ ಅಪೂರ್ವವಾದ ವಿಚಾರಗಳನ್ನೇ ವಿಶದವಾಗಿ, ಅರ್ಥಗರ್ಭಿತವಾಗಿ ಲೋಕದ ಜನತೆಗೆ ತಿಳಿಸಿಕೊಟ್ಟಿವೆ. ಕ್ರಿ.ಪೂ. ಆರನೆಯ ಶತಮಾನದಿಂದಲೂ ಸಮಗ್ರ ಭಾರತದಲ್ಲಿ ಎಲ್ಲ ಜನರ ಸಂಪರ್ಕಭಾಷೆಯಾಗಿದ್ದ ಸಂಸ್ಕೃತಭಾಷೆಯಲ್ಲಿ ವೇದಾದಿಸಕಲ ಗ್ರಂಥಗಳೂ ಉಪದಿಷ್ಟವಾಗಿರುವುದು, ಬರೆಯಲ್ಪಟ್ಟಿರುವುದು ವಿಶೇಷವಾಗಿ ಉಲ್ಲೇಖ ವಾಗಿರುವ ಅಂಶ. ವೇದಗಳ ಅಂತಿಮಭಾಗವಾದ ಉಪನಿಷತ್ತುಗಳು ಭಾರತದ ಜ್ಞಾನ ಶೃಂಗಗಳಾಗಿವೆ. ಸೃಷ್ಟಿಯ ರಹಸ್ಯ, ಪ್ರಪಂಚದ ವೈಚಿತ್ರ್ಯ, ಅದರೊಳಗೆ ಇರುವ ಮನುಷ್ಯ, ಪಶು, ಪ್ರಾಣಿ, ಪಕ್ಷಿ, ಸರೀಸೃಪ, ಕಲ್ಲುಮಣ್ಣು, ನದೀಸಮುದ್ರ, ಬೆಟ್ಟಗುಡ್ಡ, ಪರ್ವತಗಳ ಹುಟ್ಟುವಿಕೆ ಬೆಳೆಯುವಿಕೆ, ಪ್ರಕೃತಿಯ ವಿವಿಧರೂಪಗಳ ವಿಜೃಂಭಣೆ, ಮನುಷ್ಯಜೀವನದ ಉನ್ನತಿಗೆ ಸಾರ್ಥಕತೆಗೆ ಬೇಕಾದ ಅಪೂರ್ವವೂ ಅಮೂಲ್ಯವೂ ಆದ ಜೀವನಮೌಲ್ಯಗಳನ್ನು ಉಪನಿಷತ್ತುಗಳು ವಿಸ್ತಾರವಾಗಿ ತಿಳಿಸಿಕೊಡುತ್ತವೆ. ವೇದಗಳ ಕೊನೆಯ ಭಾಗವಾಗಿ ಹಾಗೂ ಹೃದಯಭಾಗವಾಗಿ ವೇದಾಂತವೆನಿಸಿಕೊಂಡಿರುವ ಉಪನಿಷತ್ತುಗಳ ಅಂತರಂಗವನ್ನು ತಿಳಿಯಪಡಿಸಲು ವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿದರು. ಹಾಗೆಯೇ ಇವರೇ, ಮಹಾಭಾರತದ ಭೀಷ್ಮಪರ್ವದಲ್ಲಿ ಕೃಷ್ಣಾರ್ಜುನ ಸಂವಾದರೂಪವಾದ ಭಗವದ್ಗೀತೆ ಯನ್ನು ರಚನೆಮಾಡಿ ಬರೆದರು. ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಭಗವದ್ಗೀತೆ ಈ ಮೂರೂ ಅಧ್ಯಾತ್ಮಜ್ಞಾನದ ಅಂತರಂಗವನ್ನು ತಿಳಿಸಿಕೊಡುವ ಭಾಗಗಳಾಗಿದ್ದು, ಮೋಕ್ಷ ಸಾಧನಗಳಾಗಿ ಪ್ರಸ್ಥಾನತ್ರಯಗಳೆನಿಸಿವೆ. ಈ ಪ್ರಸ್ಥಾನತ್ರಯಗಳಿಗೆ ಸಂಸ್ಕೃತಭಾಷೆಯಲ್ಲಿ ಮೊಟ್ಟಮೊದಲಿಗೆ ಭಾಷ್ಯಗಳನ್ನು ಬರೆದು ವೇದವಾಙ್ಮಯದ ಸಾರಸರ್ವಸ್ವವನ್ನು ಲೋಕಕ್ಕೆ ತಿಳಿಸಿಕೊಟ್ಟವರು ಭಗವಾನ್ ಆದಿಶಂಕರರು. ಇವರು ಅದ್ವೈತವೇದಾಂತದ ನಿಜತತ್ತ್ವ ಗಳನ್ನು ಜನಸಾಮಾನ್ಯರಿಗೂ ತಿಳಿಸುವ ಉದ್ದೇಶದಿಂದ ವೇದಾಂತಪರವಾದ ಸಣ್ಣಸಣ್ಣ ಪ್ರಕರಣಗ್ರಂಥಗಳನ್ನು ಬರೆದಿದ್ದಾರೆ. ಪಂಡಿತಪಾಮರರಿಗೂ ಸಹಾ ಉಪಯುಕ್ತವಾಗುವ, ನಾನಾರೀತಿಯಲ್ಲಿ ಜೀವನದ ಗಮ್ಯಮಾರ್ಗಗಳನ್ನು ತಿಳಿಸಿಕೊಡುವ ವಿವಿಧ ದೇವತೆಗಳ ಸ್ತೋತ್ರಗ್ರಂಥಗಳನ್ನೂ ಬರೆದಿದ್ದಾರೆ. ಈ ಎಲ್ಲ ಗ್ರಂಥಗಳೂ ಶ್ರೀ ಶಂಕರಭಗವತ್ಪಾದರ ವೈದುಷ್ಯ, ಲೋಕೋಪಕಾರಮನೋಭಾವ, ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸತ್ಯನಿಷ್ಠೆ, ಕರ್ತವ್ಯಪರತೆ ಮೊದಲಾದ ವಿಷಯಗಳನ್ನು ಎತ್ತಿತೋರಿಸುತ್ತವೆ. ನಮ್ಮನ್ನು ಮೀರಿಸಿದ ಶಕ್ತಿಯೊಂದು ಎಲ್ಲೆಡೆ ನೆಲೆಸಿದೆ. ಅದರಿಂದಲೇ ನಾವಿರುವುದು, ಮುನ್ನಡೆಯುತ್ತಿರುವುದು, ಎಲ್ಲ ಕಾರ್ಯಗಳನ್ನೂ ಮಾಡುತ್ತಿರುವುದು. ಆ ಅಗೋಚರವಾದ ಅತೀಂದ್ರಿಯಶಕ್ತಿಯು ಎಲ್ಲದರೊಳಗಿದೆ. ಎಲ್ಲವೂ ಅದೇ ಆಗಿದೆ. ಇರುವುದೊಂದೇ ದೈವ, ನಾನಾರೂಪಗಳಲ್ಲಿ ಈ ಪ್ರಪಂಚದಲ್ಲಿ ಗೋಚರಿಸುತ್ತಿದೆ. ಅದುವೇ ಪರಬ್ರಹ್ಮ. ಸಾಮಾನ್ಯಜನರ ನಂಬಿಕೆಯಂತೆ

ಆ ಪರಬ್ರಹ್ಮವೇ ದೇವರು. ಆ ದೇವರಿಂದಲೇ ನಾವೆಲ್ಲ ಇರುವುದು, ಅದಿಲ್ಲದೆ ನಾವಿಲ್ಲ; ಅದರಿಂದಲೇ ನಾವೆಲ್ಲ ಎಂಬುದಾಗಿ ಮೊದಲಿಗೆ ದೇವರ ಅಸ್ತಿತ್ತ್ವವನ್ನು ದೃಢಪಡಿಸಲು ವೇದೋಪನಿಷತ್ತುಗಳ, ಬ್ರಹ್ಮಸೂತ್ರಗಳ, ಭಗವದ್ಗೀತೆಯ ಆಧಾರದಿಂದ ಸಂಸ್ಕೃತದಲ್ಲಿ ಭಾಷ್ಯಗಳನ್ನು ಗ್ರಂಥಗಳನ್ನು ಬರೆದವರು, ನಂತರ ಭಾರತದಾದ್ಯಂತ ಬರಿಗಾಲಲ್ಲೇ ನಡೆಯುತ್ತಾ, ಹೋದೆಡೆಯಲ್ಲೆಲ್ಲಾ ಭಗವದಸ್ತಿತ್ವವನ್ನು ಜೀವನ, ನಿಜಾಂತರಂಗವನ್ನು ಲೋಕದ ಜನರಿಗೆ ತೆರೆದು ತೋರಿಸಿಕೊಟ್ಟವರು ಶ್ರೀ ಆದಿಶಂಕರಭಗವತ್ಪಾದರು.

ಮಹಾಮಹಿಮರಾದ ಜ್ಞಾನಪ್ರಸಾರಕರಾದ ಶ್ರೀಶಂಕರಭಗವತ್ಪಾದರ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ವೇದಾಂತತತ್ತ್ವಗಳನ್ನು ಜನರಿಗೆ ತಿಳಿಸಿಕೊಡುವುದಕ್ಕಾಗಿ ಶ್ರೀ ಶಾಂಕರತತ್ತ್ವ ಅಭಿಯಾನವನ್ನು ಮೊಟ್ಟಮೊದಲಿಗೆ ಕೈಗೊಂಡು ಕನ್ನಡನಾಡಿನಾದ್ಯಂತ ನಿರಂತರವಾಗಿ ಸಂಚರಿಸುತ್ತಾ, ಶ್ರೀ ಶಂಕರರ ತತ್ತ್ವೋಪದೇಶಗಳನ್ನು ಜನರಿಗೆ ತಿಳಿಸಿ ಕೊಡುತ್ತಾ, ಜ್ಞಾನಪ್ರಸಾರಕಾರ್ಯದಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿರುವವರು, ಕರ್ನಾಟಕರಾಜ್ಯದ ಕೃಷ್ಣರಾಜನಗರದ ಶ್ರೀ ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ ಜ್ಞಾನತಪಸ್ವಿಗಳಾದ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು. ಭಗವಾನ್ ಶ್ರೀ ಶಂಕರಾಚಾರ್ಯರ ತತ್ತ್ವೋಪದೇಶಗಳ ಪ್ರಸಾರಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟು, ಆ ದಾರಿಯಲ್ಲಿ ಸ್ವಯಂ ತಾವೇ ಕ್ರಿಯಾಶೀಲರಾಗಿ ಮಾನವ ಜೀವನದ ಮಹೋನ್ನತ ಆದರ್ಶಗಳ ಉಪದೇಶಗಳನ್ನು ಮಾಡುತ್ತಿರುವ, ವಿದ್ವಾಂಸರಿಂದ ಮಾಡಿಸುತ್ತಿರುವ ಪರಮತಪಸ್ವಿಗಳು, ದಯಾಮಯರಾದ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು 12-2-1995ರಂದು ಶ್ರೀ ಯಡತೊರೆ ಮಠದ ಪೀಠಾಧಿಪತಿಗಳಾಗಿ ಸಂನ್ಯಾಸಸ್ವೀಕಾರ ಮಾಡಿದ ದಿನದಿಂದಲೇ ಶ್ರೀಮಠದ ಅಭಿವೃದ್ಧಿಗಾಗಿ ಸಂಕಲ್ಪಮಾಡಿ, ಶ್ರೀಮಠವನ್ನು ಬಹುಬೇಗನೆ ಮುಂದೆ ತಂದು ಕರ್ನಾಟಕದಲ್ಲಿ ಶ್ರೀ ಶಂಕರತತ್ತ್ವ ಪ್ರಸಾರದ ಮೊದಲ ಜ್ಞಾನದಾಯಕ ಕೇಂದ್ರವನ್ನಾಗಿ ಮಾಡಿದುದು ಶ್ರೀಗಳವರ ಮೊದಲ ಸಾಧನ. ಜಪದಕಟ್ಟೆಯನ್ನು ಜಪ್ಯೇಶ್ವರಕ್ಷೇತ್ರವನ್ನಾಗಿ ರೂಪಿಸಿ ತಪಸ್ವಿಗಳ, ವಿದ್ವಾಂಸರ, ವೇದಶಾಸ್ತ್ರದರ್ಶನಾದಿಗಳನ್ನು ಅಧ್ಯಯನ ಮಾಡಲು ಬರುವ ಬ್ರಹ್ಮಚಾರಿವಟುಗಳ, ಅಂತೇವಾಸಿಗಳ ಜ್ಞಾನಪ್ರಸಾರದ ವಿಶ್ವವಿದ್ಯಾಲಯವನ್ನಾಗಿ ಮಾಡಿ, ವಿದ್ವಜ್ಜನರಿಂದ ಶಾಸ್ತ್ರಗೋಷ್ಠಿ, ವಾಕ್ಯಾರ್ಥವಿಚಾರಸಭೆ, ಉಪನ್ಯಾಸಗಳು, ಅಧ್ಯಯನಗೋಷ್ಠಿ, ವಟು ಶಿಕ್ಷಣಾದಿ ವಿದ್ಯಾದಾನಕಾರ್ಯಗಳನ್ನು ಮಾಡಿಸುತ್ತಾ, ಲೌಕಿಕ ಪಾರಮಾರ್ಥಿಕ ಜೀವನದ ಮಹೋನ್ನತಮೌಲ್ಯಗಳ ಸತ್ಯಪಥದಲ್ಲಿ ಪಂಡಿತಪಾಮರರೆಲ್ಲರೂ ಹೋಗುವಂತೆ ಮಾಡಿ ತಾವೇ ಅಗ್ರೇಸರರಾಗಿ ಅದನ್ನು ಮುನ್ನಡೆಸುತ್ತಿರುವ ಕರ್ಮಯೋಗಿಗಳು ಶ್ರೀಶ್ರೀಗಳು. ಉಪನೀತರಾದ ವಟುಗಳಿಗೆ ಅವರ ವಯಸ್ಸಿಗೆ ಬೇಕಾದ ಸಂಸ್ಕೃತಭಾಷೆಯ ಜ್ಞಾನವನ್ನು, ವೇದಮಂತ್ರಗಳ ಪಾಠಪ್ರವಚನಗಳನ್ನು ಶಾಸ್ತ್ರೀಯವಾದ, ಲೌಕಿಕವಾದ ಜ್ಞಾನಸಾರವನ್ನು ವಟುಶಿಕ್ಷಣದ ಮೂಲಕ ದೊರೆಯುವಂತೆ ಮಾಡಿಸುತ್ತಾ ವೇದಶಾಸ್ತ್ರ ಧರ್ಮಸಂಸ್ಕೃತಿ ಪರಂಪರೆಗಳ ರಕ್ಷಣೆಗೆ ಕಟಿಬದ್ಧರಾಗಿರುವವರು ಮಹಾಸ್ವಾಮಿಗಳು. ಬಹು ಹಿಂದೆಯೇ

ಮೈಸೂರು, ಬೆಂಗಳೂರು ಮುಂತಾದ ಮಹಾನಗರಗಳಲ್ಲಿ ಶ್ರೀ ಶಂಕರರ ತತ್ತ್ವಗಳನ್ನು ಎಲ್ಲ ಜನರಿಗೂ ತಿಳಿಸಲು ವಿದ್ವಾಂಸರಿಂದ ಶ್ರೀ ಶಾಂಕರತತ್ತ್ವೋಪನ್ಯಾಸ ಸಪ್ತಾಹ ಗಳನ್ನು ಮಾಡಿಸಿ ಶ್ರೀ ಶಂಕರರ ಜ್ಞಾನವೈಭವದ ದರ್ಶನ ಮಾಡಿಸಿದವರು ನಮ್ಮ ಈ ಮಹಾಸ್ವಾಮಿಗಳು. 'ವೇದಾಂತಭಾರತೀ' ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಮೂಲಕ ಉಪನಿಷತ್ತುಗಳ, ದರ್ಶನಗಳ ಜ್ಞಾನಧಾರೆಯನ್ನು ವಿದ್ವಾಂಸರ ಮೂಲಕ ಹರಿಸುವಂತೆ ಮಾಡಿದ್ದು, ವಿದ್ವದ್ಗೋಷ್ಠಿಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸ ಗಳನ್ನು ಏರ್ಪಡಿಸಿದ್ದು ಪುರುಷರು-ಮಹಿಳೆಯರು ಮಕ್ಕಳು-ವಿದ್ಯಾರ್ಥಿಗಳೆಲ್ಲರಿಗೂ ಶ್ರೀ ಶಂಕರರಿಂದ ರಚಿತವಾದ ಸ್ತೋತ್ರಗಳನ್ನು ತಿಂಗಳಾನುಗಟ್ಟಲೆ ಹೇಳಿಕಲಿಸಿ, ಕಡೆಯಲ್ಲೊಂದುದಿನ ಸಾವಿರಾರು ಜನರಿಂದ ಸೌಂದರ್ಯಲಹರೀ ಪಾರಾಯಣ, ದಕ್ಷಿಣಾಮೂರ್ತಿಸ್ತೋತ್ರದ ಪಾರಾಯಣ ಸಮರ್ಪಣೆಯನ್ನು ದೊಡ್ಡ ದೊಡ್ಡ ನಗರಗಳಲ್ಲಿ ಮಾಡಿಸಿದ್ದು, ಶ್ರೀ ಶಂಕರಾಚಾರ್ಯರು ಬರೆದಿರುವ ಅನೇಕ ಸಂಸ್ಕೃತ ಗ್ರಂಥಗಳನ್ನು ಕನ್ನಡ, ಇಂಗ್ಲೀಷ್, ಸಂಸ್ಕೃತಭಾಷೆಗಳಲ್ಲಿ ಅನುವಾದ ಮಾಡಿಸಿ ಮುದ್ರಿಸಿ ಶ್ರೀಮಠದಿಂದ ಪ್ರಕಟಪಡಿಸಿದ್ದು ಇವೆಲ್ಲ ಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಮಹತ್ಸಾಧನೆಗಳು. 17-2-2021ರಂದು ಶ್ರೀ ಮಹಾಸ್ವಾಮಿಗಳು ಭಾಸ್ಕರ ಶರ್ಮಾ ಎಂಬ ಬ್ರಹ್ಮಚಾರಿಗೆ ದಂಡ-ಕಮಂಡಲು-ಕಾಷಾಯಗಳನ್ನು ನೀಡಿ, ಸಂನ್ಯಾಸದೀಕ್ಷೆಯನ್ನು ಕೊಟ್ಟು, ಬ್ರಹ್ಮಾ ನಂದಭಾರತೀ ಎಂಬ ದಿವ್ಯನಾಮವನ್ನು ನೀಡಿ ಶ್ರೀಮಠದ ಉತ್ತರಾಧಿಕಾರಿ ಶಿಷ್ಯರನ್ನಾಗಿ ಸ್ವೀಕರಿಸಿರುವುದು ಅವರ ದೀರ್ಘಮುಂದಾಲೋಚನೆಗೆ ಜ್ವಲಂತಸಾಕ್ಷಿಯಾಗಿದೆ. ಚಿಕ್ಕ ಸ್ವಾಮಿಗಳಿಗೂ ಸಂಸ್ಕೃತಭಾಷೆಯ ಶಿಕ್ಷಣವನ್ನು ಕೊಡಿಸುತ್ತಾ, ಶ್ರೀಮಠದ ಆಚಾರವಿಚಾರ ಗಳು ಪರಂಪರೆಗಳ ಪರಿಚಯವನ್ನು ಮಾಡಿಸುತ್ತಾ ವೇದಶಾಸ್ತ್ರಧರ್ಮಪ್ರಸಾರಕ್ಕಾಗಿ ಸಜ್ಜುಗೊಳಿಸುತ್ತಿರುವುದು ಶ್ರೀಗಳ ಅದ್ಭುತಕಾರ್ಯವಾಗಿದೆ.

ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಶಿಷ್ಯಸ್ವೀಕಾರದನಂತರ ಅವರೊಂದಿಗೆ ಶ್ರೀ ಶೃಂಗೇರಿ ದಕ್ಷಿಣಾಮ್ನಾಯ ಶಾರದಾಪೀಠದ ಮಹಾಸನ್ನಿಧಾನಂಗಳವರಾದ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಮತ್ತು ಅವರ ಶಿಷ್ಯರಾದ ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಬಳಿಹೋಗಿ, ಅವರ ಆಶೀರ್ವಾದ ಪಡೆದು ಅದರ ದಿವ್ಯ ಮಾರ್ಗದರ್ಶನದೊಂದಿಗೆ 2021ರಲ್ಲಿ ಒಂದು ಶುಭದಿವಸ ಶ್ರೀ ಶಾಂಕರ ತತ್ತ್ವಗಳ ಉಪದೇಶಗಳ ಪ್ರಸಾರಕ್ಕಾಗಿ ಉತ್ತರಭಾರತ ತೀರ್ಥಯಾತ್ರೆಗೆ ಸಕಲ ಸಿದ್ಧತೆಗ ಳನ್ನು ಮಾಡಿಕೊಂಡು ಹೊರಟರು. ಹರಿದ್ವಾರ, ಹೃಷೀಕೇಶ, ಕಾಶೀ ಮೊದಲಾದ ಪುಣ್ಯ ತೀರ್ಥಕ್ಷೇತ್ರಗಳಿಗೆ ಹೋಗಿ ಪವಿತ್ರ ನದೀತೀರ್ಥಗಳಲ್ಲಿ ಸ್ನಾನಮಾಡಿ ಅಲ್ಲಿನ ದೇವತೆಗಳ ದರ್ಶನ ಮಾಡಿದರು. ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಪ್ರತ್ಯಕ್ಷ ಭಾಗವಹಿಸಿದರು. ಅಲ್ಲಲ್ಲಿ ಇರುವ ಮಠಮಂದಿರಗಳು, ಆಶ್ರಮಗಳು, ಪಾಠಶಾಲೆ ಮಹಾವಿದ್ಯಾಲಯಗಳಿಗೆ ಹೋಗಿ ಮಠಾಧಿಪತಿಗಳನ್ನು, ಸಾಧುಸಂತರನ್ನು, ಶಿಕ್ಷಣವೇತ್ತರನ್ನು , ಸಂಘಸಂಸ್ಥೆಗಳ ಮುಖ್ಯಸ್ಥರನ್ನು ಕಂಡು,ಜೊತೆಗೆ ಸರ್ಕಾರಿ ಇಲಾಖೆಗಳ ಕಾರ್ಯಾಲಯಗಳಿಗೆ ಹೋಗಿ

ಅಲ್ಲಿನ ಮುಖ್ಯ ಅಧಿಕಾರಿಗಳನ್ನು ಕಂಡು ಧರ್ಮಸಂಸ್ಕೃತಿ ಪ್ರಸಾರಕ್ಕಾಗಿ ಎಲ್ಲರೊಡನೆ ಚರ್ಚಿಸಿ, ಚಿಂತಿಸಿ, ತತ್ತ್ವಪ್ರಸಾರ ಕಾರ್ಯದಲ್ಲಿ ನಿರತರಾದರು. ಶ್ರೀ ಶಂಕರರು ತಪಸ್ಸು ಮಾಡಿದ ಜಾಗಗಳನ್ನು, ಗ್ರಂಥಗಳನ್ನು ಬರೆದ ಸ್ಥಳಗಳನ್ನು ಸಂದರ್ಶಿಸಿ, ಉಪದೇಶಪ್ರಸಾರ ಕಾರ್ಯಕ್ಕೆ ಸ್ಫೂರ್ತಿ ಪಡೆದರು. ತಾವು ಹೋದೆಡೆಯಲ್ಲೆಲ್ಲಾ ವಿದ್ವಾಂಸರಿಂದ ಉಪನ್ಯಾಸ-ಪ್ರವಚನಗಳನ್ನು ಮಾಡಿಸಿದರು. ಪುರುಷರು-ಮಹಿಳೆಯರು ಮಕ್ಕಳಿಂದ ಸಾಮೂಹಿಕವಾಗಿ ಸೌಂದರ್ಯಲಹರೀ ಸ್ತೋತ್ರ, ದಕ್ಷಿಣಾಮೂರ್ತಿಸ್ತೋತ್ರ ಮುಂತಾದವುಗಳ ಪಾರಾಯಣ ಸಮರ್ಪಣೆ ಮಾಡಿಸಿದರು. ಅಲ್ಲಲ್ಲಿ ಇರುವ ಶಾಲಾಕಾಲೇಜುಸಂಘಸಂಸ್ಥೆ ಆಶ್ರಮಗಳ ಜನರಿಗೆ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಶಂಕರರ ಸ್ತೋತ್ರಗಳಲ್ಲಿ, ತತ್ತ್ವಗಳಲ್ಲಿ ವಿಶೇಷ ಆಸಕ್ತಿ ಮೂಡುವಂತೆ ಮಾಡಿದರು.

ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಮಾಡಿದ ಈ ಎಲ್ಲ ಸಿದ್ಧಿಸಾಧನೆಗಳನ್ನು ಪುಸ್ತಕ ರೂಪದಲ್ಲಿ ಬರೆದು ಪ್ರಕಟಿಸಿದರೆ ಲೋಕದ ಜನರಿಗೆ ಸತ್ಕಾರ್ಯದಲ್ಲಿ ಮುನ್ನುಗ್ಗಲು ಪ್ರೇರಣೆ ದೊರೆಯುತ್ತದೆ ಎಂದು ಚಿಂತಿಸಿದ ಮಹಾಸ್ವಾಮಿಗಳು ಶ್ರೀಮಠದ ಮೂಲಕ ಉತ್ತರಭಾರತ ಪ್ರವಾಸಕಥನ ಪುಸ್ತಕವನ್ನು ವ್ಯವಸ್ಥಿತರೂಪದಲ್ಲಿ ನಮ್ಮ ದೇಶದ, ನನ್ನ ಕನ್ನಡನಾಡಿನ ಪ್ರಸಿದ್ಧ ಕನ್ನಡ ವಿದ್ವಾಂಸರಾದ, ಕನ್ನಡ ಪ್ರಾಧ್ಯಾಪಕರಾದ ಡಾ॥ ಕೆ. ಅನಂತರಾಮು ಅವರನ್ನು ಕೇಳಿಕೊಂಡಾಗ ಅವರು ಸಂತೋಷದಿಂದ ಒಪ್ಪಿ ಹಲವಾರು ದಿನಗಳು ಪರಿಶ್ರಮಿಸಿ ಪವಿತ್ರ ಪರಿವ್ರಜನ ಎಂಬ ಹೆಸರಿನಲ್ಲಿ ಇತಿಹಾಸರೂಪದ ಅತ್ಯುತ್ತಮವಾದ ಪುಸ್ತಕವನ್ನು ಬರೆದು ಕೊಟ್ಟು ಸಾರಸ್ವತಲೋಕಕ್ಕೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ, ಅಮೂಲ್ಯ ಕೊಡುಗೆಯನ್ನು ಕೊಟ್ಟಿದ್ದಾರೆ.

ಡಾ॥ ಕೆ. ಅನಂತರಾಮು ಅವರು ಕನ್ನಡ-ಹಿಂದೀ-ಭಾಷಾಶಾಸ್ತ್ರ ಮೂರೂ ವಿಷಯಗಳಲ್ಲೂ ಎಮ್.ಎ, ಪಿಹೆಚ್.ಡಿ ಪದವೀಧರರು. ಚಿನ್ನದ ಪದಕ ಪಡೆದವರು. ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ 35 ವರ್ಷಗಳಿಗಿಂತಲೂ ಹೆಚ್ಚು ಕಾಲ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡವನ್ನು ಬೋಧಿಸಿದ ಶ್ರೇಷ್ಠ ಅಧ್ಯಾಪಕರು. ನಾಡಿನ ಎಲ್ಲ ಕಡೆ ಶಾಲಾಕಾಲೇಜುಗಳಲ್ಲಿ, ಸಂಘಸಂಸ್ಥೆಗಳಲ್ಲಿ, ಮಠಮಂದಿರಗಳಲ್ಲಿ ಕನ್ನಡದಲ್ಲಿ ಸಾವಿರಾರು ಉಪನ್ಯಾಸಗಳನ್ನು ನೀಡಿದ್ದಾರೆ. ರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅಮೂಲ್ಯ ಪ್ರಬಂಧಗಳನ್ನು ಬರೆದು ಓದಿ ಚರ್ಚಿಸಿದ್ದಾರೆ. ನಮ್ಮ ನಾಡಿನ ಉತ್ತಮ ವಿದ್ವಾಂಸರು ಇವರು. ಉತ್ತಮ ಭಾಷಣಕಾರರಾಗಿದ್ದು ಅನೇಕ ಅಪೂರ್ವ ಶ್ರೇಷ್ಠ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಶ್ರೇಷ್ಠ ಭಾಷಾಶಾಸ್ತ್ರ ಹಿಂದೀ ವಿದ್ವಾಂಸರಾದ ಡಾ॥ ಕೆ. ಅನಂತರಾಮು ಅವರು ಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಉತ್ತರ ಭಾರತತೀರ್ಥಯಾತ್ರೆಯ ವಿವರಗಳನ್ನು ಗ್ರಂಥದ ವಿಷಯಗಳನ್ನಾಗಿ ಮಾಡಿಕೊಂಡು ಸರಳವಾದ, ಸುಲಭವಾದ ಲಲಿತವಾದ ದ್ರಾಕ್ಷಾಪಾಕಶೈಲಿಯಲ್ಲಿ ಪುಸ್ತಕವನ್ನು ಬರೆದು ಕೊಟ್ಟು ಮಹಾಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಜೊತೆಗೆ ನಾಡಿನ ಸಾರಸ್ವತ ಲೋಕದ ಜನರಿಗೆ ಮಹದುಪಕಾರವನ್ನು ಮಾಡಿದ್ದಾರೆ. ಈ ಕೃತಿಲೇಖನಕಾರ್ಯವು

ಡಾ॥ ಕೆ. ಅನಂತರಾಮು ಅವರಿಗೆ ಮಹೋನ್ನತ ಗೌರವವನ್ನು ತಂದುಕೊಟ್ಟಿದೆ. ಅವರ ವಿದ್ವತ್ತನ್ನು ಹೆಚ್ಚಿಸಿದೆ. ಡಾ॥ ಕೆ. ಅನಂತರಾಮು ಅವರನ್ನು ನಾವೆಲ್ಲರೂ ಅಭಿವಂದಿಸೋಣ, ಅಭಿನಂದಿಸೋಣ.

ಈ ಪುಸ್ತಕದಲ್ಲಿ ಒಟ್ಟು 8 ಅಧ್ಯಾಯಗಳಿವೆ.

i ‘ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೂರ್ವೇತಿಹಾಸ’ ಎನ್ನುವ ಮೊದಲನೆಯ ಅಧ್ಯಾಯದಲ್ಲಿ ಯೋಗಾನಂದೇಶ್ವರ ಸರಸ್ವತೀ ಮಠದ ಹಾಗೂ ಅಲ್ಲಿದ್ದ ಹಿಂದಿನ ಸ್ವಾಮಿಗಳೆಲ್ಲರ ಪೂರ್ವೇತಿಹಾಸಪರಿಚಯವನ್ನು 22 ಶೀರ್ಷಿಕೆಗಳಲ್ಲಿ ಬಹಳ ಅಚ್ಚುಕಟ್ಟಾಗಿ ಚಿಕ್ಕದಾಗಿ ಚೊಕ್ಕದಾಗಿ ಮಾಡಿಕೊಟ್ಟಿದ್ದಾರೆ.

ii ಎರಡನೆಯ ಅಧ್ಯಾಯವಾದ ‘ಮಠದ ವಿಕಾಸದ ಮೈಲಿಗಲ್ಲುಗಳು’ ಎಂಬುದರಲ್ಲಿ ಒಟ್ಟು 57 ಶೀರ್ಷಿಕೆಗಳಲ್ಲಿ ಕೆ.ಆರ್.ನಗರದ ಯಡತೊರೆ ಮಠದ ಜೀರ್ಣೋದ್ಧಾರ ಕಾರ್ಯಗಳು, ಜಪದಕಟ್ಟೆಯ ಜೀರ್ಣೋದ್ಧಾರಕೆಲಸಗಳು, ಶಾಂಕರಸರ್ವಸ್ವ ವೇದಾಂತಭಾರತಿಯ ಕಾರ್ಯಗಳು, ವಟುಶಿಕ್ಷಣಸಂಸ್ಕಾರಶಿಬಿರಗಳ ಚಾಲನೆ ಮುಂತಾದ ವಿಷಯಗಳನ್ನು ಕ್ರಮಬದ್ಧವಾಗಿ ಜೋಡಿಸಿಕೊಂಡು ಸಂಕ್ಷಿಪ್ತವಾಗಿ ವಿವರಿಸಿ ಬರೆದಿದ್ದಾರೆ.

iii ‘ಯಾತ್ರೆಯ ಪೂರ್ವಸಿದ್ಧತೆಗಳು ಮತ್ತು ಯಾತ್ರಾರಂಭ’ ಎಂಬ ಮೂರನೆಯ ಅಧ್ಯಾಯದಲ್ಲಿ 31 ಶೀರ್ಷಿಕೆಗಳಲ್ಲಿ ಉತ್ತರಭಾರತತೀರ್ಥಯಾತ್ರೆಗೆ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳು ಹೋಗಲು ಮಾಡಿಕೊಂಡ ಸಿದ್ಧತಾಕಾರ್ಯಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ.

iv ‘ಹರಿದ್ವಾರದಲ್ಲಿ ಮಾತೆಯರು ಮೊಳಗಿಸಿದ ಸೌಂದರ್ಯಲಹರಿಯ ವಿಜಯ ದುಂದುಭಿ’ ಎಂಬ ನಾಲ್ಕನೆಯ ಅಧ್ಯಾಯದಲ್ಲಿ 59 ಶೀರ್ಷಿಕೆಗಳಲ್ಲಿ ಶ್ರೀಮಠದಿಂದ ಶಿಕ್ಷಣಪಡೆದ ಮಾತೆಯರು ಹರಿದ್ವಾರದಲ್ಲಿ ಮಾಡಿದ ಸೌಂದರ್ಯಲಹರೀ ಪಾರಾಯಣಸಮರ್ಪಣೆಯ ಅದ್ಭುತಕಾರ್ಯವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ.

v ‘ಹರಿದ್ವಾರದ ಹಾದಿಯಲ್ಲಿ ಶ್ರೀಗಳ ಯಾತ್ರಾನುಕ್ರಮಣ’ ಎಂಬ ಐದನೆಯ ಅಧ್ಯಾಯದಲ್ಲಿ 73 ತಲೆಬರಹಗಳಲ್ಲಿ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಮಾಡಿದ ಹರಿದ್ವಾರ ಮುಂತಾದ ತೀರ್ಥಕ್ಷೇತ್ರಗಳ ಯಾತ್ರಾವೈಭವವನ್ನು ಕುತೂಹಲಬರುವ ರೀತಿಯಲ್ಲಿ ಬಣ್ಣಿಸಿ ಬರೆದಿದ್ದಾರೆ.

vi ‘ಹರಿದ್ವಾರದಲ್ಲಿ ಶಂಕರಯಶೋವೈಭವ’ ಎಂಬ ಆರನೆಯ ಅಧ್ಯಾಯದಲ್ಲಿ ಶ್ರೀ ಶಂಕರಾಚಾರ್ಯರ ತತ್ತ್ವಾಭಿಯಾನ ಉಪದೇಶಗಳ ಬಣ್ಣನೆಯೇ ಮೊದಲಾದ ಅಮೂಲ್ಯ ವಿಷಯಗಳನ್ನು 68 ವಿಷಯ ಶೀರ್ಷಿಕೆಗಳಲ್ಲಿ ಮತ್ತೆ ಮತ್ತೆ ಓದಬೇಕು ಎನ್ನುವ ರೀತಿಯಲ್ಲಿ ಬಣ್ಣಿಸಿ ಬರೆದಿರುವುದು ಡಾ॥ ಕೆ. ಅನಂತರಾಮು ಅವರ ವಿದ್ವತ್ತು, ಭಾಷಾಪ್ರೌಢಿಮೆ, ಜ್ಞಾನವಿಸ್ತರಗಳನ್ನು ಹೊರಚೆಲ್ಲುತ್ತದೆ.

vii ಏಳನೆಯ ಅಧ್ಯಾಯವೇ ‘ಹೃಷೀಕೇಶ ಮತ್ತು ಉತ್ತರಕಾಶೀಯಾತ್ರೆಯ ಪುಣ್ಯಾನು

ಭವಗಳು' ಎನ್ನುವುದು. 39 ಶಿರೋನಾಮೆಗಳಲ್ಲಿ ಹೃಷೀಕೇಶ, ಉತ್ತರಕಾಶೀ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆ ಮತ್ತು ಮಹಾಸ್ವಾಮಿಗಳಿಗೆ ಅವರ ಜೊತೆಯಲ್ಲಿದ್ದವರಿಗೆ ಆದ ದಿವ್ಯಾನುಭವಗಳ ನೆನಪನ್ನು ಓದುಗರಿಗೆ ತಿಳಿಯುವಂತೆ ವರ್ಣಿಸಿ ಸರಳವಾಗಿ ಬರೆದಿರುವುದು ನಾವೇ ಅಲ್ಲಿ ಪ್ರತ್ಯಕ್ಷವಾಗಿ ತೀರ್ಥಯಾತ್ರೆ ಮಾಡುತ್ತಿದ್ದೇವೇನೋ– ಎಂಬ ದಿವ್ಯಾನುಭವವನ್ನು ಓದುಗರಿಗೂ ಮಾಡಿಕೊಡುತ್ತದೆ.

viii ಕಡೆಯ ಎಂಟನೆಯ ಅಧ್ಯಾಯವೇ 'ಗಂಗೆಯ ತಡಿಯಿಂದ ಕಾವೇರಿಯ ಮಡಿಲಿಗೆ ಸದ್ಗುರು ವಿಜಯದ ಕಥಾನಕ'ವೆನ್ನುವುದು. 99 ಶೀರ್ಷಿಕೆಗಳಲ್ಲಿ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಉತ್ತರಭಾರತಯಾತ್ರೆಗಳನ್ನು ಪೂರ್ಣವಾಗಿ ಮಾಡಿ ಸ್ವಸ್ಥಾನಕ್ಕೆ ಹಿಂದಿರುಗಿಬಂದ ಅದ್ಭುತ ಕಥಾನಕವನ್ನು ಡಾ॥ ಕೆ. ಅನಂತರಾಮುರವರು ನಿತ್ಯನೂತನವಾಗಿ ವರ್ಣಿಸಿ ಬರೆದಿದ್ದಾರೆ.

ಡಾ॥ ಕೆ. ಅನಂತರಾಮು ಅವರ ಬರಹಶೈಲಿ ಅತ್ಯದ್ಭುತ, ನವನವೀನವಾದುದು, ಸುಲಭವೂ, ಸರಳವೂ ಲಲಿತವೂ ಆದ ಶೈಲಿಯಲ್ಲಿ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರ ಸಿದ್ಧಿಸಾಧನೆಗಳನ್ನು, ಜ್ಞಾನಪ್ರಸಾರಕಾರ್ಯಗಳನ್ನು ಶಂಕರರ ಬಗ್ಗೆ ಅವರಿಗಿರುವ ಅಪಾರಭಕ್ತಿಶ್ರದ್ಧೆಗಳನ್ನು ಮೃದುಮಧುರವಾಗಿ ವರ್ಣಿಸಿ ಬರೆದಿದ್ದಾರೆ. ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ವೈಭವಗಳು, ಮಹಿಮೆಗಳು, ಶ್ರೀ ಶಂಕರಭಾರತೀ ಮಹಾಸ್ವಾಮಿಗಳ ವಿದ್ಯಾಪ್ರೌಢಿಮೆ, ಸಮಾಜದ ಸಾಮಾನ್ಯಜನರ ಬಗ್ಗೆಯೂ ಇರುವ ತುಡಿತ, ಶ್ರೀಶಂಕರಾಚಾರ್ಯರ ಉಪದೇಶತತ್ತ್ವಗಳನ್ನು ಭಾರತದಲ್ಲಷ್ಟೇ ಅಲ್ಲ, ಇಡೀ ವಿಶ್ವದಲ್ಲೇ ಪ್ರಸಾರ ಮಾಡಿ ಶ್ರೀ ಶಂಕರರ ತಪಸ್ಸಿದ್ಧಿ, ಜ್ಞಾನವೈಭವ, ಲೋಕೋಪಕಾರಕಾರ್ಯಗಳನ್ನು ಲೋಕದ ಜನತೆಗೆ ಪರಿಚಯ ಮಾಡಿಸಿ ಅವರು ನಡೆದ ದಾರಿಯಲ್ಲೇ ಎಲ್ಲರನ್ನೂ ಕರೆದುಕೊಂಡು ಹೋಗಿ ಜೀವನದ ಸಾಕ್ಷಾತ್ಕಾರವನ್ನು ಎಲ್ಲರಿಗೂ ಮಾಡಿಸಬೇಕೆಂದು ಅಹರ್ನಿಶಿ ಕ್ರಿಯಾಶೀಲರಾಗಿರುವ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀಮಠದ ಈಗಿನ ಪೀಠಾಧಿಪತಿಗಳಾದ ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಚರಣಾರವಿಂದಗಳಲ್ಲಿ ಮತ್ತು ಗುರುಗಳ ಹಾದಿಯಲ್ಲೇ ಮುನ್ನಡೆಯುತ್ತಿರುವ ಕಿರಿಯ ಗುರುಗಳಾದ ಶ್ರೀಶ್ರೀ ಬ್ರಹ್ಮಾನಂದಭಾರತೀ ಸ್ವಾಮಿಗಳ ಚರಣಾರವಿಂದಗಳಲ್ಲಿ ಶ್ರದ್ಧಾಭಕ್ತಿ-ವಿನಯಪೂರ್ವಕವಾದ ಅನಂತ ಪ್ರಣಾಮಗಳನ್ನು ಸಲ್ಲಸುತ್ತೇನೆ. ಈ ಚಾರಿತ್ರಿಕವಾದ ಪುಸ್ತಕವನ್ನು ಅದ್ಭುತವಾಗಿ ಬರೆದು ಕೃತಕೃತ್ಯರಾಗಿರುವ ಹಿರಿಯ ವಿದ್ವಾಂಸರಾದ ಪ್ರೊ.ಡಾ॥ ಕೆ. ಅನಂತರಾಮು ಅವರಿಗೆ ಕೃತಜ್ಞತೆಯ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ಗುರುಗಳ ಆಣತಿಯಂತೆ ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ನನಗೆ ತಿಳಿಸಿ, ಗುರುಗಳ ಒಂದು ಸತ್ಕಾರ್ಯವನ್ನು ಮಾಡಲು ನನಗೆ ಅವಕಾಶವನ್ನು ಒದಗಿಸಿಕೊಟ್ಟ ಸಂಸ್ಕೃತವಿದ್ವಾಂಸರು, ಸಂಸ್ಕೃತ ಅಧ್ಯಾಪಕರೂ ಆಗಿರುವ ಸನ್ಮಿತ್ರರಾದ ವಿದ್ವಾನ್ ಜಯರಾಮ ಭಟ್ಟರಿಗೆ ಕೃತಜ್ಞತೆಯ ನಮನಗಳನ್ನು ಸಲ್ಲಿಸುತ್ತೇನೆ. ಜ್ಞಾನವೈರಾಗ್ಯಸಂಪನ್ನರಾದ ಶ್ರೀ ಶಂಕರಾಚಾರ್ಯಸದ್ಗುರು

ಗಳ ಜ್ಞಾನಪ್ರಭೆಯನ್ನು ಲೋಕದ ಜನತೆಗೆ ಪ್ರಸಾರಮಾಡುತ್ತಿರುವ ಸದ್ಗುರುಗಳಾದ ಶ್ರೀ ಶಂಕರಭಾರತೀ ಮಹಾಸ್ವಾಮಿಗಳ ಜ್ಞಾನಸತ್ರಕಾರ್ಯದಲ್ಲಿ ನನಗೂ ಸೇವೆ ಸಲ್ಲಿಸುವ ಒಂದು ಅವಕಾಶವು ದೊರೆತುದು ನನ್ನ ಪೂರ್ವಜನ್ಮದ ಪುಣ್ಯವಿಶೇಷವಾಗಿದೆ. ನನಗೆ ತುಂಬಾ ಸಂತೋಷವಾಗಿದೆ. ನನ್ನ ಇಷ್ಟದೇವತೆ, ಕುಲದೇವತೆ-ಜ್ಞಾನದೇವತೆಗಳಿಗೆ ವಿದ್ಯೆ ಕಲಿಸಿದ ಎಲ್ಲ ಗುರುಗಳಿಗೆ ಭಕ್ತಿಪೂರ್ವಕವಾದ ಸಹಸ್ರಸಹಸ್ರ ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಶ್ರೀ ಮಹಾಸ್ವಾಮಿಗಳ ಚರಣಾರಾಧಕ ಸಜ್ಜನ ವಿಧೇಯ

ವಿದ್ವಾನ್ ಡಾ॥ ಟಿ.ವಿ ಸತ್ಯನಾರಾಯಣ,
ತಲಕಾಡು, ಮೈಸೂರು
ಎಮ್. ಎ. ಪಿಹೆಚ್.ಡಿ, ನಿವೃತ್ತ ನಿರ್ದೇಶಕರು
ಮತ್ತು ಗೌರವ ಸಲಹೆಗಾರರು
ಪ್ರಾಚ್ಯವಿದ್ಯಾಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ
ಗೌರವ ಸಂಪಾದಕರು
ಪ್ರತಿಭಾಪಟು, ವೇದಸೂಕ್ತವಿದ್ಯಾಸಾಗರ,
ವೇದವಿದ್ಯಾನಿಧಿ, ಆದರ್ಶಸೇವಾರತ್ನ
ಸಂಸ್ಕೃತಸಾಹಿತ್ಯ ಶಿರೋಮಣಿ,
ವಿಜಯೀಂದ್ರಪ್ರಶಸ್ತಿಭಾಜನ
ಅಲಂಕಾರ-ವ್ಯಾಕರಣಶಾಸ್ತ್ರ ವಿದ್ವಾನ್,
ಸಂಸ್ಕೃತಕೋವಿದ

ಶ್ರೀ ಶೋಭಕೃತ್ ಸಂ॥ದ ವರ್ತಮಾನ
ಶಾಲಿವಾಹನಶಕವರ್ಷ 1946 ವರ್ತಮಾನ
ಕಲಿವರ್ಷ 5125 ಉತ್ತರಾಯಣ,
ವಸಂತಋತು, ಗುರುವಾರ ವೈಶಾಖಮಾಸ
ಕೃಷ್ಣಪಕ್ಷ
ಷಷ್ಠೀ ಉಪರಿ ಸಪ್ತಮೀ ಉತ್ತರಾಷಾಢಾ
ನಕ್ಷತ್ರ ಶುಭಯೋಗ ವಣಿಸ್ಕರಣ,
ಮೇಷಮಾಸತೇದಿ 28 ಆಂಗ್ಲದಿನಾಂಕ
11-5-2023

# ಲೇಖಕರ ನಿವೇದನೆ

ಈ ಗ್ರಂಥರಚನೆಗೆ ಶ್ರೀಶಂಕರಭಾರತೀಸದ್ಗುರುಮಹಾರಾಜರು ಮತ್ತು ಅವರ ಕರಕಮಲ ಸಂಜಾತರಾದ ಶ್ರೀಬ್ರಹ್ಮಾನಂದಭಾರತೀಸದ್ಗುರುಮಹಾರಾಜರು ಪ್ರಮುಖ ಪ್ರೇರಕರಾಗಿದ್ದಾರೆ. ಅವರಿಬ್ಬರೂ ಹಲವು ಸಿಟಿಂಗುಗಳ ಮೂಲಕ ತಾವು ಕೈಗೊಂಡ ಉತ್ತರಭಾರತ ಯಾತ್ರೆಯ ದಿವ್ಯಾನುಭವಗಳನ್ನೆಲ್ಲಾ ಸ್ಮರಣೆಗೆ ತಂದುಕೊಂಡು ನಿರೂಪಿಸಿ, ನಾನು ಭಾವ ದೀಪ್ತನಾಗುವಂತೆ ಹರಸಿದ್ದಾರೆ. ನಾನೇ ಕಣ್ಣಾರೆ ಎಲ್ಲವನ್ನೂ ಕಂಡೆನೋ ಎನ್ನುವಹಾಗೆ ಅಲ್ಲಿನ ಘಟನಾವಿಶೇಷಗಳನ್ನೆಲ್ಲಾ ಬಿಡಿಸಿಬಿಡಿಸಿ ಬಣ್ಣಿಸಿ, ಗ್ರಂಥರಚನೆಗೆ ಬೇಕಾಗುವ ಮೂಲಸಾಮಗ್ರಿಯನ್ನು ದೊರಕಿಸಿಕೊಟ್ಟಿದ್ದಾರೆ. ಗ್ರಂಥರಚನೆ ಪೂರ್ಣಗೊಂಡಬಳಿಕ, ಆ ಮಹಾರಾಜರುಗಳು ತಾವೇ ಒಮ್ಮೆ ಪರಿಶೀಲಿಸಿ, "ಗುಣಾಧಾನ ದೋಷವಿಸರ್ಜನ" ಎಂಬ ನುಡಿಯಂತೆ ಗುಣಗಳನ್ನು ಜೋಡಿಸಿ, ದೋಷಗಳನ್ನು ಕಳೆದುಹಾಕಿ, ಈ ಕೃತಿಗೆ ಪ್ರಾಣ ಪ್ರತಿಷ್ಠೆಮಾಡಿದ್ದಾರೆ. ಅಧ್ಯಯನಶೀಲರೂ ಪುಸ್ತಕಪ್ರೇಮಿಗಳೂ ಆದ ಆ ಮಹಾರಾಜರುಗಳಿಗೆ ನನ್ನ ಭಕ್ತಿಪೂರ್ವಕ ಸಾಷ್ಟಾಂಗನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಸದ್ಗುರುಗಳ ಯಾತ್ರೆಯ ಆಪ್ತಪರಿವಾರದಲ್ಲಿದ್ದ ವೇ।ಬ್ರ।ಶ್ರೀ। ದಿನೇಶಹೆಗಡೆಯವರು, ಯಾತ್ರೆಯು ಮುಂದೆಮುಂದೆ ಸಾಗುವಾಗ ಮತ್ತು ಮರಳುವಾಗ ಬಿಡಾರಮಾಡಿದ ತಾಣಗಳಲ್ಲಿ ನಡೆದ ಕಾರ್ಯಕಲಾಪಗಳನ್ನೆಲ್ಲ ಬಿಡಿಬಿಡಿಯಾಗಿ ತಿಳಿಸಿಕೊಟ್ಟು ಮಹೋಪಕಾರ ಮಾಡಿದ್ದಾರೆ. ಯಾವುದೇ ಲಿಖಿತದಾಖಲೆಗಳ ನೆರವಿಲ್ಲದೆ, ಅವರು ತಮ್ಮ ಚಿತ್ತದಿಂದಲೇ ಎಲ್ಲವನ್ನೂ ಸೆಳೆಸೆಳೆದು ನನ್ನಮುಂದಿಡುತ್ತಿದ್ದಾಗ, ನಾನು ಅವರ ನೆನಪಿನ ಬಲವನ್ನು ಕಂಡು ಆಶ್ಚರ್ಯಚಕಿತನಾಗುತ್ತಿದ್ದೆ. ಅವರ ಉಪಕಾರಕ್ಕೆ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ವೇದಾಂತಭಾರತಿಯ ನಿರ್ದೇಶಕರಾದ ಡಾ॥ ಶ್ರೀಧರಹೆಗಡೆಯವರು ತಮ್ಮ ಅನುಭವಗಳನ್ನು ನಿರೂಪಿಸುವುದರ ಜೊತೆಗೆ, ತಮ್ಮ ಡೈರಿಯ ಮೂಲಕ ನನಗೆ ಅನೇಕ ಉಪಯುಕ್ತ ಮಾಹಿತಿಗಳನ್ನು ತಿಳಿಸಿಕೊಟ್ಟು ಈ ಗ್ರಂಥವು ಮಾಹಿತಿಪೂರ್ಣವಾಗುವಂತೆ ಮಾಡಿದ್ದಾರೆ. ಅವರೊಡನೆಯೇ ವಿದ್ವಾಂಸರುಗಳಾದ ಶ್ರೀವೆಂಕಟರಮಣಭಟ್ಟ, ಶ್ರೀಹನುಮಂತರಾವ್ ಅವರುಗಳು ಕೂಡ ಅನುಭವಕಥನಮಾಡಿ ಉಪಕರಿಸಿದ್ದಾರೆ. ಯಾತ್ರೆಯಲ್ಲಿ ಸ್ವಲ್ಪಕಾಲ ಗುರುಸಾರಥಿಗಳಾಗಿದ್ದ ಡಾ॥ ರವಿಶಂಕರ್ ಅವರು ಯಾತ್ರಾಕಾಲದ ಹಲವಾರು ಸಭಾ ಕಾರ್ಯಕ್ರಮಗಳ ವಿವರಗಳನ್ನು ತಿಳಿಯಾಗಿ ತಿಳಿಸಿಕೊಟ್ಟು ಉಪಕರಿಸಿದ್ದಾರೆ. "ಕೇಂದ್ರ ಸಂಸ್ಥಾಪನಾಚಾರ್ಯ" ಶ್ರೀ ಕೆ. ಎನ್. ಸುರೇಶ್ ಅವರ ಅನುಭವಗಳಂತೂ ವರ್ಣಮಯವಾಗಿವೆ. ಉತ್ತರಕಾಶಿಯಲ್ಲಿರುವ ಶ್ರೀನವೀನರೊಡನೆಯೂ ನಾನು ವಾರ್ತಾಲಾಪ ನಡೆಸಿ, ಬೇಕಾದ ವಿವರಗಳನ್ನು ಸಂಗ್ರಹಿಸಿಕೊಂಡಿದ್ದೇನೆ. ಯಾತ್ರಾಕಾಲದಲ್ಲಿ ವಿವಿಧ ಅಂಗಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾ, ಸಮಸ್ಯೆಗಳು ಎದುರಾದರೆ ಪರಿಹರಿಸುತ್ತಾ, ಅದನ್ನೆಲ್ಲಾ ನನಗೆ ಸಾವಧಾನವಾಗಿ ತಿಳಿಸಿಕೊಟ್ಟು ಶ್ರೀಗಣಪತಿ ಪಿ. ಭಟ್ ಅವರು ಇನ್ನಿಲ್ಲದ ಪರಿಯ ಉಪಕಾರವೆಸಗಿದ್ದಾರೆ. ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ

ಆಸ್ಥಾನವಿದ್ವಾನ್ ಜಿ.ಮಹಾಬಲೇಶ್ವರಭಟ್ಟರೂ ನನ್ನೊಡನೆ ಸಹಕರಿಸಿದ್ದಾರೆ. ಕಂಪ್ಯೂಟರ್ ಮಾಸ್ಟರ್ ಪ್ರಶಾಂತ್ ಅವರಂತೂ ತಮ್ಮ ಬಹುಮುಖವಾದ ಅನುಭವಗಳನ್ನು ತಿಳಿಸಿ ಕೊಟ್ಟಿದ್ದಾರೆ. ಯಾತ್ರಾವಿವರಗಳನ್ನೊಳಗೊಂಡ ಕೆಲವು ಮುದ್ರಿತಮಾಹಿತಿಗಳನ್ನು ನನಗೆ ನೀಡಿದ್ದಾರೆ. ತಾವು ಸೆರೆಹಿಡಿದಿಟ್ಟುಕೊಂಡಿದ್ದ ಡಾಕ್ಯುಮೆಂಟರಿ ರೂಪದ ಕೆಲವು ಪ್ರವಾಸ ಚಿತ್ರಗಳನ್ನು ನನಗೆ ತೋರಿಸಿದ್ದಾರೆ. ಆ ಹೊತ್ತಿನ ಹರಿದ್ವಾರದ ಕೆಲವು ಹಿಂದೀದಿನಪತ್ರಿಕೆ ಗಳನ್ನು ನನಗೆ ನೀಡಿದ್ದಾರೆ. ಅವರ ಉಪಕಾರ ಬಹುಮುಖವಾದುದೆಂದೇ ಹೇಳುತ್ತೇನೆ. ಈ ಮೇಲ್ಕಂಡ ಮಹನೀಯರುಗಳಿಗೆಲ್ಲ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಸದ್ಗುರುಗಳು ಹೊರಡುವುದಕ್ಕಿಂತ ಮುಂಚಿತವಾಗಿಯೇ ಹರಿದ್ವಾರಕ್ಕೆ ಹೋಗಿ ಬಿಡಾರದ ವ್ಯವಸ್ಥೆಯೇ ಮುಂತಾದ ಕಾರ್ಯಗಳನ್ನು ನಿರ್ವಹಿಸಿದ ವಿಶ್ರಾಂತ ಆಡಳಿತಾಧಿ ಕಾರಿಗಳಾದ ಶ್ರೀ ಅನಂತಪದ್ಮನಾಭರು ತಮ್ಮ ಅನುಭವಗಳನ್ನೆಲ್ಲಾ ವಿಸ್ತಾರವಾಗಿ ನಿರೂಪಿಸಿ ಈ ಗ್ರಂಥವು ಉಪಯುಕ್ತವಾಗುವಂತೆ ಮಾಡಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಯಾತ್ರಾತಂಡದಲ್ಲಿದ್ದ ಸೌಂದರ್ಯಲಹರಿಯ ಸಂಪನ್ಮೂಲಮಾತೆಯರಲ್ಲಿ ಅನೇಕರು ತಮ್ಮ ಅನುಭವಗಳನ್ನು ಹೊಸಹೊಸದಾಗಿ, ಬಿಸಿಬಿಸಿಯಾಗಿ ನನಗೆ ಉಣಬಡಿಸಿದ್ದಾರೆ. ಅವರು ಪಡೆದುಕೊಂಡ ವೈವಿಧ್ಯಮಯವಾದ ಪುಣ್ಯಾನುಭವಗಳೇನು, ನಿರೂಪಣಾಕಾಲದ ಅವರ ಪರಮೋತ್ಸಾಹವೇನು, ಮೇಲಿಂದಮೇಲೆ ಸದ್ಗುರುಗಳನ್ನು ಸ್ಮರಿಸಿಕೊಂಡು ಭಾವಪರವಶೆಯರಾಗುತ್ತಿದ್ದುದೇನು– ಅವರ ನುಡಿಗಳನ್ನೆಲ್ಲಾ ಕೇಳುತ್ತ ಕೇಳುತ್ತ ನಾನು ಮೈಮರೆತುಬಿಡುತ್ತಿದ್ದೆ. ಅವರ ಅನುಭವಗಳು ನನಗೆ ಲಭಿಸದಿದ್ದರೆ ಈ ಗ್ರಂಥವು ರಸಹೀನ ವಾಗಿಬಿಡುತ್ತಿತ್ತು. ಕರೋನಾಕಂಟಕದ ನಡುವೆಯೂ ಸ್ವಾಮಿಗಳ ಶ್ರೀರಕ್ಷೆಯೇ ಕಾರಣವಾಗಿ, ಅವರು ಕೇಂದ್ರಗಳನ್ನು ನಿರ್ವಹಿಸಿದ ಪರಿಯನ್ನು ನೆನೆದರೇ ಸಾಕು, ನಾನು ಈಗಲೂ ಆನಂದತುಂದಿಲನಾಗುತ್ತೇನೆ. ಸೌಂದರ್ಯಲಹರಿಯ ಮಹಾಭಿಯಾನವು ಸಫಲವಾಗ ಲೆಂದು ಮಾತೆಯರೆಲ್ಲರೂ “ಇಷ್ಟಪಟ್ಟು” ಕಷ್ಟಪಟ್ಟಿದ್ದಾರೆ. ಅದರಿಂದಾಗಿಯೇ ಅವರ ಅನುಭವಗಳೆಲ್ಲವೂ ಉಜ್ವಲವಾಗಿ ಎದ್ದುಬಂದಿವೆ. ಆ ಸಂಪನ್ಮೂಲಮಾತೆಯರಿಗೆಲ್ಲಾ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಪ್ರವಾಸತಂಡದಲ್ಲಿ ಸೇರ್ಪಡೆಯಾಗದಿದ್ದರೂ ಹಾಸನದ ಡಾ॥ ಎಸ್. ಆರ್. ಜಯ ರಾಮ್, ವಿದ್ವಾನ್ ಜಯರಾಮಭಟ್ಟ, ಮಠದ ವಿದ್ವಾಂಸರಾದ ವೇ।ಬ್ರ।ಶ್ರೀ। ಸುದರ್ಶನಭಟ್ಟ, ಪ್ರಸ್ತುತ ಆಡಳಿತಾಧಿಕಾರಿಗಳಾದ ಶ್ರೀ ಹೆಚ್.ಎಸ್.ನಾಗೇಶ್ ಅವರುಗಳು ನನಗೆ ಹಲವು ಉಪಯುಕ್ತ ಮಾಹಿತಿಗಳನ್ನು ದೊರಕಿಸಿಕೊಟ್ಟು ಹೆಚ್ಚಿನ ಉಪಕಾರ ಮಾಡಿದ್ದಾರೆ. ಅವರಿಗೆಲ್ಲ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ದರ್ಜಿಗೆ ಹೊಲಿಯಲೆಂದು ಬಟ್ಟೆಯನ್ನೇನೋ ನಾವು ಕೊಡುತ್ತೇವೆ. ನಮ್ಮ ಬಟ್ಟೆ ತುಂಬಾ ಬೆಲೆಬಾಳುವಂಥದ್ದೇ ಆಗಿರಬಹುದು. ಆದರೆ ಬಟ್ಟೆಯು ಉತ್ತಮ ಉಡುಗೆಯಾಗ ಬೇಕಾದರೆ, ದರ್ಜಿಯ ಚಮತ್ಕಾರವೇ ಮುಖ್ಯ. ನಾನೇನೋ ಬರೆದೆ, ಆದರೆ ಅದನ್ನು ಅಚ್ಚು

ಕಟ್ಟಾಗಿ ಕಂಪೋಸ್ ಮಾಡುವವರು ಬೇಕಲ್ಲವೇ! ಬೆಂಗಳೂರಿನ ಗುರುಭಕ್ತರಾದ ಶ್ರೀರವಿ ಅಮೂರ್ ಮತ್ತು ಅವರ ಸುಪುತ್ರ ಶ್ರೀ ಹೃಷೀಕೇಶ್ ಇಬ್ಬರೂ ಕೂಡಿ, ತಮ್ಮ ಮನೆಯಲ್ಲಿಯೇ ಇರುವ ಯಂತ್ರವಿಶೇಷಗಳಿಂದ ಇದನ್ನು ಅತ್ಯಂತ ಸುಂದರವಾಗಿ ಕಂಪೋಸ್ ಮಾಡಿದ್ದಾರೆ. ಗ್ರಂಥಕ್ಕೆ ಯಾವ ಗಾತ್ರದ ಅಕ್ಷರಗಳನ್ನು ಬಳಸಬೇಕು, ಪುಟಕ್ಕೆ ಎಷ್ಟುಸಾಲುಗಳಿರಬೇಕು, ಸ್ಪೇಸ್ ಔಟ್ ಆಗದಂತೆ ಹೇಗೆ ಮಾಡಬೇಕು, ಒಟ್ಟಾರೆ ಗ್ರಂಥದ ಲೇಔಟ್ ಹೇಗಿರಬೇಕು– ಎಂಬುದನ್ನೆಲ್ಲ ಪರಸ್ಪರ ಚರ್ಚೆಮಾಡಿ, ನಿರ್ವಹಿಸಿ, ಈ ಗ್ರಂಥವು ಸರ್ವಾಂಗಸುಂದರ ವಾಗುವಂತೆ ಮಾಡಿದ್ದಾರೆ. ಗ್ರಂಥವನ್ನು ಈ ರೂಪಕ್ಕೆ ತರಲು ಅವರು ಪಟ್ಟಿರುವ ಶ್ರಮವು ಅಪಾರವಾದುದೆಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆ ತಂದೆಮಕ್ಕಳಿಗೆ ನನ್ನ ವಿಶೇಷ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಬೇರೆಬೇರೆ ಕಾಲಾವಧಿಗಳಲ್ಲಿ ಶ್ರೀಯೋಗಾನಂದೇಶ್ವರಸರಸ್ವತೀಮಠದಿಂದಲೇ ಪ್ರಕಟ ವಾಗಿರುವ ಶಾಂಕರಭಾರತೀ, ಯೋಗಾನಂದ, ಶ್ರೀಜಪ್ಯೇಶ್ವರ ಎಂಬ ಮೂರು ಸ್ಮರಣ ಸಂಚಿಕೆಗಳು ನನ್ನ ನಿರೂಪಣೆಯ ಉಪಕಾರಕ್ಕೆ ಒದಗಿಬಂದಿವೆ. ವೇದಾಂತಭಾರತಿಯ ಸಹಯೋಗದಿಂದ ತುಮಕೂರುವಿಶ್ವವಿದ್ಯಾನಿಲಯವು ಪ್ರಕಟಿಸಿರುವ conference proceedings ಎಂಬ ಸ್ಮರಣಸಂಚಿಕೆಯೂ ನನಗೆ ಉಪಕಾರಮಾಡಿದೆ. ಅಷ್ಟುಮಾತ್ರ ವಲ್ಲದೆ ಈ ಹಿಂದೆ ನಾನು ನನ್ನ ಬಂಧುಬಳಗದವರೊಡಗೂಡಿ ಕಾಶಿ ಮುಂತಾದ ಕ್ಷೇತ್ರಗಳ ಯಾತ್ರೆಗೆಂದು ಹೋಗಿದ್ದಾಗ, ಅಲ್ಲಲ್ಲಿ ಸಂಗ್ರಹಿಸಿದ್ದ ಹಿಂದೀಭಾಷೆಯ ಕ್ಷೇತ್ರಮಹಾತ್ಮೆ ಮತ್ತು ಸ್ಥಳೇತಿಹಾಸಗಳ ಗ್ರಂಥವಿವರಗಳನ್ನು ಅಧ್ಯಯನಮಾಡಿ ಯಥಾಸ್ಥಾನದಲ್ಲಿ ಅವುಗಳನ್ನು ಸೇರ್ಪಡೆಮಾಡಿದ್ದೇನೆ. ಜಪ್ಯೇಶ್ವರಸ್ವಾಮಿಯ ಕುಂಭಾಭಿಷೇಕಮಹೋತ್ಸವ, ಶಿಷ್ಯಸ್ವೀಕಾರ ಮಹೋತ್ಸವ, ತುಮಕೂರುವಿಶ್ವವಿದ್ಯಾನಿಲಯದಲ್ಲಿ ನಡೆದ ಎರಡು ಮಹಾಸಮ್ಮೇಳನಗಳು, ಕೆಲವು ಮಹಾಭಿಯಾನಗಳು– ಮುಂತಾದುವುಗಳಲ್ಲಿ ನಾನು ಪ್ರತ್ಯಕ್ಷವಾಗಿ ಪಾಲ್ಗೊಂಡು ಬರೆದಿಟ್ಟುಕೊಂಡಿದ್ದ ವಿವರಗಳಲ್ಲಿ ಸೂಕ್ತವಾದುವನ್ನು ಇಲ್ಲಿಗೆ ಜೋಡಿಸಿಕೊಂಡಿದ್ದೇನೆ.

“ನೀವೂ ಯಾತ್ರಾತಂಡದಲ್ಲಿಯೇ ಇದ್ದವರೋ ಎಂಬಂತೆ ಎಲ್ಲವನ್ನೂ ಕಣ್ಣಿಗೆ ಕಟ್ಟುವ ಹಾಗೆ ವರ್ಣನೆ ಮಾಡಿದ್ದೀರಲ್ಲಾ, ಅದು ಹೇಗೆ ಸಾಧ್ಯವಾಯಿತು” ಎಂದು ಈ ಕೃತಿಯನ್ನು ಹಸ್ತಪ್ರತಿಯ ರೂಪದಲ್ಲಿದ್ದಾಗ ಓದಿದ ನನ್ನ ಮಿತ್ರರೊಬ್ಬರು ನನ್ನನ್ನು ಕೇಳಿದರು. ಅದಕ್ಕೆ ನಾನು “ನಮ್ಮ ಶಂಕರಭಾರತಿಸದ್ಗುರುಮಹಾರಾಜರು “ನೀವು ಯಾತ್ರೆಗೆ ಬರದಿದ್ದರೂ ಯಾತ್ರಾಕಾಲದ ಎಲ್ಲ ವಿವರಗಳೂ ನಿಮಗೆ ಸಾಕ್ಷಾತ್ಕಾರವಾಗಲಿ” ಎಂದು ಆಶೀರ್ವಾದ ಮಾಡಿದ್ದಾರೆ” ಎಂದು ಉತ್ತರಕೊಟ್ಟೆ. ಸ್ವಾಮಿಮಹಾರಾಜರ ಕೃಪಾಕಟಾಕ್ಷಗಳೇ ನನ್ನ ಕೈಹಿಡಿದು ಬರೆಸಿವೆ, ನಾನು ಲಿಪಿಕಾರ ಮಾತ್ರನಾಗಿದ್ದೇನೆ ಎಂದು ನಾನು ಅರಿಕೆಮಾಡಿ ಕೊಳ್ಳಲೇಬೇಕು.

ಯಾರ ಪ್ರೇರಣೆಯಿಂದ ಈ ಗ್ರಂಥಕ್ಕೊಂದು ಅಂಕುರಾರ್ಪಣವಾಯಿತೋ, ಯಾರ ಆಶೀರ್ವಾದದಿಂದ ಈ ಗ್ರಂಥವು ಈ ರೂಪವನ್ನು ತಾಳಿ ಬೆಳಕುಕಂಡಿದೆಯೋ, ಆ ಸ್ವಾಮಿ ಮಹಾರಾಜರುಗಳ ಚರಣಕಮಲಗಳಲ್ಲಿ ಈ ಕೃತಿಯನ್ನು ಅರ್ಪಿಸಿ ಅವರ ಆಶೀರ್ವಾದ

ಗಳನ್ನು ಬೇಡುತ್ತೇನೆ.

ಕಾವ್ಯ ನಾಟಕ ಕಾದಂಬರಿ ಆತ್ಮಕಥೆ ಜೀವನಚರಿತ್ರೆ ಎಂಬಂತೆ ಬಹುಪ್ರಕಾರವಾಗಿ ಹಬ್ಬಿ ಬೆಳೆದಿರುವ ಕನ್ನಡಸಾಹಿತ್ಯದ ಬಗೆಗಳಲ್ಲಿ "ಪ್ರವಾಸಕಥನ" ಎಂಬುದೂ ಒಂದು. ಅದನ್ನು ಆಂಗ್ಲಭಾಷೆಯಲ್ಲಿ 'ಟ್ರಾವಲಾಗ್' ಎಂದು ಕರೆಯುತ್ತಾರೆ. ಆ ಪರಿಯ ಪ್ರವಾಸ ಕಥನವೆಂಬ ಸಾಹಿತ್ಯಪ್ರಕಾರಕ್ಕೆ ಪ್ರಸ್ತುತಗ್ರಂಥವೂ ಸೇರ್ಪಡೆಯಾಗುತ್ತದೆ. ಸಹೃದಯರಾದ ಕನ್ನಡಿಗರೆಲ್ಲರೂ ಈ ಕೃತಿಯನ್ನು ಪ್ರೀತಿಯಿಂದ ಬರಮಾಡಿಕೊಂಡು ಅಧ್ಯಯನಮಾಡಿ, ಸದ್ಗುರುಗಳ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇನೆ.

20-5-2023

| | |
|---|---|
| ಶ್ರೀಬ್ರಹ್ಮಾನಂದಭಾರತೀಸದ್ಗುರುಮಹಾರಾಜರ | ಕೆ. ಅನಂತರಾಮು |
| ವರ್ಧಂತಿಮಹೋತ್ಸವ | ನಿವೃತ್ತ ಕನ್ನಡ ಪ್ರಾಧ್ಯಾಪಕ |
| ಹೊಳೆನರಸೀಪುರ | ಮೈಸೂರುವಿಶ್ವವಿದ್ಯಾನಿಲಯ |

# ಪ್ರಕಾಶಕರ ಮಾತು

ಉಪನಿಷತ್ಪ್ರತಿಪಾದ್ಯವಾದ ಅದ್ವೈತವೇದಾಂತತತ್ತ್ವವೆಂಬ ಪರಂಜ್ಯೋತಿಯನ್ನು ವಿಶ್ವಕ್ಕೆ ತೋರಿಸಿಕೊಟ್ಟು ತನ್ಮೂಲಕ ಸನಾತನಧರ್ಮವನ್ನು ಪುನಃಪ್ರತಿಷ್ಠಾಪಿಸಿ ಮನುಕುಲಕ್ಕೆ ಧರ್ಮಮಾರ್ಗವನ್ನು ಉಪದೇಶಿಸಿದವರು ಮಹಾಮಹಿಮರಾದ ಶ್ರೀ ಶಂಕರಭಗವತ್ಪಾದರು. ಇದೇ ಏಕಾತ್ಮತತ್ತ್ವವನ್ನು ಅನುಸರಿಸುತ್ತಿರುವ ಅಸಂಖ್ಯಮಠಗಳಲ್ಲಿ ಯಡತೊರೆ ಶ್ರೀಯೋಗಾನಂದೇಶ್ವರ ಸರಸ್ವತೀ ಮಠವೂ ಒಂದಾಗಿದೆ. ಇಲ್ಲಿಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಇಪ್ಪತ್ತೈದು ಸಂವತ್ಸರಗಳಿಂದ ಅಧ್ಯಯನ-ಅಧ್ಯಾಪನ-ಪ್ರಣವೋಪಾಸನಾದ್ಯನುಷ್ಠಾನನಿರತರಾಗಿದ್ದು, ಜನಸಾಮಾನ್ಯರಿಗೆ ಶ್ರೀ ಶಂಕರಭಗವತ್ಪಾದರ ಉಪದೇಶಗಳನ್ನು ಬೋಧಿಸುತ್ತಿದ್ದಾರೆ. ಕರ್ನಾಟಕ ರಾಜ್ಯಾದ್ಯಂತ ಶಾಂಕರತತ್ತ್ವವನ್ನು ಪ್ರಚಾರ-ಪ್ರಸಾರ ಮಾಡಿದನಂತರ ದೇಶವ್ಯಾಪಿಯಾಗಿ ಸಮಾಜದ ಎಲ್ಲ ಸ್ತರದ ಜನರಿಗೆ ಭಗವತ್ಪಾದರ ತತ್ತ್ವವನ್ನು, ಅವರು ರಚಿಸಿದ ಸ್ತೋತ್ರ ಮತ್ತು ಪ್ರಕರಣ ಗ್ರಂಥಗಳ ಮೂಲಕ ಬೋಧಿಸುವ ಸತ್ಸಂಕಲ್ಪ ಮಾಡಿದ ಪೂಜ್ಯ ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಮೊದಲಿಗೆ ಪರಮಪೂಜ್ಯ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂಗಳವರ ಹಾಗೂ ಸನ್ನಿಧಾನಂಗಳವರ ಅನುಗ್ರಹವನ್ನು ಪಡೆದು, ತಮ್ಮ ಕರಕಮಲ ಸಂಜಾತರಾದ ಪ.ಪೂ. ಶ್ರೀ ಶ್ರೀ ಬ್ರಹ್ಮಾನಂದಭಾರತೀ ಸ್ವಾಮಿಗಳನ್ನು ತಮ್ಮೊಂದಿಗೆ ಕರೆದುಕೊಂಡು ಮೊದಲ ಬಾರಿಗೆ ಉತ್ತರಭಾರತದೆಡೆಗೆ ಯಾತ್ರೆಯನ್ನು ಕೈಗೊಂಡರು. ದಿನಾಂಕ 16-3-2021ರಿಂದ 10-5-2021ರವರೆಗೆ ಭೂಮಾರ್ಗದಲ್ಲಿ ಸಂಚಾರಮಾಡಿದ ಈ ಆಧ್ಯಾತ್ಮಿಕ ಪ್ರವಾಸದಲ್ಲಿ ಉಭಯ ಶ್ರೀಶ್ರೀಗಳು ವಾಸಮಾಡಿದ ಪ್ರದೇಶಗಳು, ದರ್ಶನ ಮಾಡಿದ ಪುಣ್ಯತಾಣಗಳು, ಭೇಟಿಮಾಡಿದ ಸಂನ್ಯಾಸಿಗಳು, ಸಂಘಸಂಸ್ಥೆಗಳ ಗಣ್ಯರು, ಬೋಧಿಸಿದ ತಾತ್ತ್ವಿಕ ವಿಷಯಗಳು ಅನನ್ಯ ಹಾಗೂ ಅವಿಸ್ಮರಣೀಯವಾದವುಗಳು.

ಪರಮಪೂಜ್ಯ ಉಭಯ ಶ್ರೀಗಳವರ ಈ ಪ್ರವಾಸದ ಕಥನವು ಪುಸ್ತಕರೂಪದಲ್ಲಿ ಬರಬೇಕೆಂದು ತೀರ್ಮಾನಿಸಿ, ಮೈಸೂರಿನ ಶ್ರೀಯುತ ಡಾ॥ ಕೆ. ಅನಂತರಾಮು ಅವರನ್ನು ಕೇಳಿಕೊಂಡೆವು. ಕನ್ನಡ ಸಾರಸ್ವತಲೋಕಕ್ಕೆ ಐದು ದಶಕಗಳಿಗಿಂತಲೂ ಹೆಚ್ಚು ವರ್ಷಗಳಿಂದ ತಮ್ಮ ವಿದ್ವತ್ಪೂರ್ಣವಾದ ಬರೆವಣಿಗೆ, ಪ್ರವಚನಗಳಿಂದ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡುತ್ತಾ ಬಂದಿರುವ, ಮಠಮಾನ್ಯಗಳ, ಧಾರ್ಮಿಕ-ಆಧ್ಯಾತ್ಮಿಕ ಕಾರ್ಯಗಳ ಬಗ್ಗೆ, ಯತಿಗಳ, ಪೀಠಾಧಿಪತಿಗಳ ಬಗ್ಗೆ ವಿಶೇಷವಾದ ಶ್ರದ್ಧಾಭಕ್ತಿಯಿಂದ ಕೂಡಿದ ಗೌರವವುಳ್ಳ, ಋಜುಸ್ವಭಾವದ ಇವರು ಅತ್ಯಂತ ಸಂತೋಷದಿಂದ ಒಪ್ಪಿ ಗುರುಸೇವಾಭಾವದಿಂದ ಸಮಗ್ರ ವಿಷಯಗಳನ್ನು ಸಂಗ್ರಹಿಸಿ ಸುಂದರ ಹಾಗೂ ಸರಳ ಶೈಲಿಯಲ್ಲಿ ಪ್ರವಾಸಕಥನವನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ವೇದಾಂತಭಾರತಿಯು ಕೃತಜ್ಞತಾಪೂರ್ವಕ ನಮಸ್ಕಾರಗಳನ್ನು ಧನ್ಯವಾದಗಳನ್ನು ತಿಳಿಸುತ್ತಿದೆ.

ಪರಿವ್ರಾಜಕಾಚಾರ್ಯವರ್ಯರು ಏಕಾತ್ಮತತ್ತ್ವಪ್ರಚಾರ-ಪ್ರಸಾರಕ್ಕಾಗಿ ಕೈಗೊಂಡ ಪವಿತ್ರತಮವಾದ ಪರ್ಯಟನೆಯ ವಿವರವನ್ನು ತಿಳಿಸುವ "ಪವಿತ್ರಪರಿವ್ರಜನ" ಎಂಬ ಅರ್ಥ

ಪೂರ್ಣವಾದ ಶೀರ್ಷಿಕೆಯ ಅಡಿಯಲ್ಲಿ 'ವೇದಾಂತಭಾರತೀ' ಸಂಸ್ಥೆಯು ಪ್ರಕಟಿಸುತ್ತಿರುವ ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ನಾಡಿನ ಹಿರಿಯ ವಿದ್ವಾಂಸರೂ, ಮೈಸೂರಿನ ಓರಿಯಂಟಲ್ ಇನ್ಸ್ಟಿಟ್ಯೂಟ್‌ನಲ್ಲಿ ಸೇವೆಸಲ್ಲಿಸಿ ನಿವೃತ್ತರಾದ ವಿದ್ವಾನ್ ಟಿ.ವಿ. ಸತ್ಯನಾರಾಯಣ ಅವರನ್ನು ಕೇಳಿಕೊಂಡಾಗ ಅವರು ಬಹಳ ಸಂತೋಷದಿಂದ ಒಪ್ಪಿ ತಮ್ಮ ವಿದ್ವತ್ಪೂರ್ಣವಾದ ಭಾಷೆಯಲ್ಲಿ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಇವರಿಗೆ ಅನಂತ ಧನ್ಯವಾದಗಳು.

ಹಸ್ತಪ್ರತಿಯನ್ನು ಕಂಪ್ಯೂಟರಿನಲ್ಲಿ ಸಾವಧಾನಚಿತ್ತದಿಂದ ಅಳವಡಿಸಿ, ಮುದ್ರಣಕ್ಕೆ ಯೋಗ್ಯವಾಗುವಂತೆ ಮಾಡಿಕೊಟ್ಟವರು ವೇದಾಂತಭಾರತಿಯ ಹಿರಿಯ ಕಾರ್ಯಕರ್ತರೂ ಆದ ಶ್ರೀಯುತ ರವಿ ಅಮೂರ್ ಅವರು. ಇವರಿಗೆ ಪೂರ್ಣಸಹಕಾರ ನೀಡಿದವರು ಇವರ ಸುಪುತ್ರ ಹೃಷೀಕೇಶ್ ಅವರು. ಇವರೀರ್ವರಿಗೂ ಅನಂತ ಧನ್ಯವಾದಗಳು.

ಈ ಉತ್ತರಭಾರತಯಾತ್ರೆಯ ಅನುಭವವನ್ನು ಆಮೂಲಾಗ್ರವಾಗಿ ಸ್ವತಃ ವಿವರಿಸುವುದರ ಜೊತೆಗೆ ಪುಸ್ತಕರೂಪದಲ್ಲಿ ತರಲು ಅನುಮತಿಯನ್ನು ನೀಡಿ ಅನುಗ್ರಹಸಂದೇಶವನ್ನು ದಯಪಾಲಿಸಿದ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರಿಗೆ ಮತ್ತು ತಮ್ಮ ಅನುಭವಾಮೃತವನ್ನು ಅನುಗ್ರಹಿಸಿದ ಪರಮಪೂಜ್ಯ ಶ್ರೀಶ್ರೀ ಬ್ರಹ್ಮಾನಂದಭಾರತೀ ಸ್ವಾಮಿಗಳವರಿಗೆ ಸಾಷ್ಟಾಂಗಪ್ರಣಾಮಗಳು.

ಈ ಗ್ರಂಥವನ್ನು ಮುದ್ರಿಸಿಕೊಟ್ಟ ಸ್ಕ್ಯಾನ್‌ಪ್ರಿಂಟ್‌ನ ಮಾಲೀಕರಿಗೆ ಹೃತ್ಪೂರ್ವಕ ವಂದನೆಗಳು.

ಡಾ॥ ಶ್ರೀಧರ ಹೆಗಡೆ
ನಿರ್ದೇಶಕರು,
ವೇದಾಂತಭಾರತೀ

ಶೋಭಕೃತ್ ಸಂ॥ದ ವೈಶಾಖ ಕೃಷ್ಣ
ಏಕಾದಶೀ ಸೋಮವಾರ 15-5-2023

# ಪರಿವಿಡಿ

**ಮೊದಲನೆಯ ಅಧ್ಯಾಯ** **1-22**

**ಶ್ರೀಯೋಗಾನಂದೇಶ್ವರಸರಸ್ವತೀಮಠದ ಪೂರ್ವೇತಿಹಾಸ**

ಅರ್ಕೇಶ್ವರನ ಪುಣ್ಯತೀರ್ಥ 1 ಯೋಗಾನಂದೇಶ್ವರಸರಸ್ವತಿಗಳ ಆಗಮನ 1 ನೀಲ ಕಂಠೇಶ್ವರ ಮತ್ತು ಪಟ್ಟಾಭಿರಾಮದೇವರು 2 ರಾಮಬ್ರಹ್ಮಾನಂದಸರಸ್ವತಿಗಳು 3 ಹೊಳೆನರಸೀಪುರದಲ್ಲಿ ಶಾಖಾಮಠ 4 ದ್ವಿಭುಜರಾಮನು ಚತುರ್ಭುಜರಾಮನಾದ ಪವಾಡ 4 ದೊರೆಯತನಕ ದೂರು 6 ತತ್ತ್ವಸಂಗ್ರಹರಾಮಾಯಣ 7 ಮಾಧವಾನಂದಸರಸ್ವತಿಸ್ವಾಮಿಗಳು 7 ರಾಮಯೋಗಬ್ರಹ್ಮಾನಂದಸ್ವಾಮಿಗಳು 8 ಯಡತೊರೆಮಠದ ಸ್ಥಳಾಂತರ 10 ವಾಸುದೇವಾನಂದಸರಸ್ವತಿಸ್ವಾಮಿಗಳು 11 ಮಠದಲ್ಲಿ ನಡೆದ ಪುರೋಭಿವೃದ್ಧಿ ಕಾರ್ಯಗಳು 15 ಕೆಲವು ಮಹತ್ವದ ವಿಚಾರಗಳು 16 ಶ್ರೀಶಂಕರಭಾರತೀಸ್ವಾಮಿಗಳು 17 ಮೂಲಮಠದ ಸ್ಥಿತಿಗತಿಗಳು 19 ಅರ್ಕೇಶ್ವರಸ್ವಾಮಿದೇವಾಲಯದ ಪರಿಚಯ 21 ಕೆ. ಆರ್. ನಗರದ ಪರಿಚಯ 22

**ಎರಡನೆಯ ಅಧ್ಯಾಯ** **23-84**

**ಮಠದ ವಿಕಾಸದ ಮೈಲಿಗಲ್ಲುಗಳು**

ಮೊದಲನೆಯ ಭಾಗ: ಪೀಠಾಧಿಪತ್ಯದ ಸುವರ್ಣಯುಗ 23 ಕೆ. ಆರ್. ನಗರದ ಮಠದ ಜೀರ್ಣೋದ್ಧಾರ 23 ನಾಲ್ಕು ದೇವಸನ್ನಿಧಾನಗಳು 24 ಶ್ರೀರಾಮನಿವಾಸ 25 ಹೊಳೆ ನರಸೀಪುರದ ಶಾಖಾಮಠದ ಜೀರ್ಣೋದ್ಧಾರ 26 ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ 27 ಜಪದಕಟ್ಟೆ ಎಂಬ ಜಪ್ಯೇಶ್ವರಕ್ಷೇತ್ರ 27 ಹೆಬಸೂರು ಮತ್ತು ಶೀಗವಾಳು ಗ್ರಾಮಗಳು 28 ಜಪದಕಟ್ಟೆಯ ವಿಕಾಸದ ಚರಿತ್ರೆ 28 ಶ್ರೀಗಂಗಾಧರೇಶ್ವರ ಸೇವಾಸಮಿತಿ 30 ಜಪದಕಟ್ಟೆಯ ವಿಶೇಷ ದಿನಗಳು 30 ಕಾಲಾಯ ತಸ್ಮೈ ನಮಃ 31 ಜೀರ್ಣೋದ್ಧಾರದ ಕನಸುಕಂಡ ಸ್ವಾಮಿಗಳು 32 ಸ್ವಾಮಿಗಳಿಗೆ ಒಲಿದುಬಂದ ಗಂಗಾಧರೇಶ್ವರ 32 ಅಂತರ್ದೃಷ್ಟಿ ಮತ್ತು ಅಷ್ಟಮಂಗಲಪ್ರಶ್ನೆ 33 ಯೋಗಿಪ್ರತ್ಯಕ್ಷ ಮತ್ತು ಶಾಸ್ತ್ರಪ್ರತ್ಯಕ್ಷ 33 ಜಪದಕಟ್ಟೆಯಲ್ಲಿ ಸಂಕ್ಷಿಪ್ತ ಉತ್ಖನನಗಳು 33 ಸ್ಕಾಂದಪುರಾಣದಲ್ಲಿ ಜಪ್ಯೇಶ್ವರಕ್ಷೇತ್ರ 34 ಜಪದಕಟ್ಟೆಯೆಂದರೆ ಜಪ್ಯೇಶ್ವರಕ್ಷೇತ್ರ 36 ಜಪದಕಟ್ಟೆಯ ಜೀರ್ಣೋದ್ಧಾರ ಕಾರ್ಯಗಳು 36 ಜಪ್ಯೇಶ್ವರನ ದೇವಾಲಯದ ಸನ್ನಿಧಾನಗಳು 37 ಐದುದಿನಗಳ ಕುಂಭಾಭಿಷೇಕ ಮಹೋತ್ಸವ 39 ಕುಂಭಾಭಿಷೇಕದ ಮಹತ್ವ 40 ಆಶೀರ್ವಚನವೈಭವ 40 ಜಪದಕಟ್ಟೆಯ ಮಾರ್ಗವೈಭವ 42 ಕಾರ್ಯಭಾರಗಳ ಆಶ್ರಯಧಾಮ 42 ಜಪ್ಯೇಶ್ವರನನ್ನು ಕುರಿತ ಸ್ತೋತ್ರ ಸಾಹಿತ್ಯ 43 ಸದ್ಗುರುಗಳಿಗೆ ಸ್ತೋತ್ರಾಂಜಲಿ 46 ಬೆಂಗಳೂರಿನ ಶ್ರೀರಾಮಶಂಕರಪ್ರಸಾದ 47 ಎರಡನೆಯ ಭಾಗ: ಶಾಂಕರಸರ್ವಸ್ವ ಪ್ರಸಾರಭಾರತಿ 48 ಆತ್ಮೋದ್ಧಾರದ ತಪಃಸಾಧನೆ 48 ವಟುಶಿಕ್ಷಣವೆಂಬ ಸಂಸ್ಕಾರಶಿಬಿರ 49 ಕರೋನಾ ಅಬ್ಬರದ ನಡುವೆ 50 ವೇದಾಂತ ಭಾರತೀ ಎಂಬ ಸಂಶೋಧನ ಮತ್ತು ಗ್ರಂಥಪ್ರಕಾಶನ ಸಂಸ್ಥೆ 52 ವೇದಾಂತಭಾರತಿಯ

ಪ್ರಕಟನಪ್ರೌಢಿಮೆ 52 ಶಾಂಕರಸಂದೇಶಸಪ್ತಾಹ 57 ಆಕಾಶೋತ್ಪತ್ತಿ ಆಕಾಶಲಯ 59 ವೇದನಮನ 59 ವೇದಾಂತಚಿಂತನ ಗೋಷ್ಠಿಗಳು 60 ವಿವೇಕೋತ್ಕರ್ಷಿಣೀ ಪರೀಕ್ಷೆಗಳು 61 ರಾಷ್ಟ್ರೀಯ ವಿಚಾರಸಂಕಿರಣಗಳು 61 ವೇದಾಂತ ಒಂದು ಸಮಗ್ರ ಚಿಂತನೆ 62 ಗುರುಗಳ ಆಶೀರ್ವಚನ 66 ಸಮ್ಮೇಳನಕ್ಕೊಂದು ಸ್ಮರಣಸಂಚಿಕೆ 66 ವಿದ್ಯಾರಣ್ಯರು ಒಂದು ಸಮಗ್ರಚಿಂತನೆ 67 ಗೋಷ್ಠಿಗಳ ವೈಭವ 68 ಅನುಭವಕಥನ 70 ಸದ್ಗುರುಮಹಾರಾಜರ ಆಶೀರ್ವಚನ 70 ಶಾಂಕರಸಂಗೀತವೆಂಬ ವಿನೂತನ ಶೈಲಿಗೆ ಜನಕರು 72 ಶ್ರೀಶಾಂಕರಗೀತಸೌರಭ 74 ಶಂಕರಜಯಂತಿ ಅಭಿಯಾನ 75 ಭಾಷ್ಯಪಾರಾಯಣಸತ್ರ ಮತ್ತು ಭಾಷ್ಯಾಮೃತವಾಹಿನಿ 76 ಶಂಕರಯಶೋವೈಭವ 76 ಧರ್ಮಜಾಗೃತಿಯ ಸಮ್ಮೇಳನಗಳು 78 ಶಾಂಕರಜಾಗೃತಿಯಾತ್ರೆಗಳು 79 ವಿವೇಕ ದೀಪಿನೀ ಅಭಿಯಾನಗಳು 80 ಜ್ಞಾನದೀಪ 82 ಸೌಂದರ್ಯಲಹರಿಕೋಟ್ಯರ್ಚನೆ 82

**ಮೂರನೆಯ ಅಧ್ಯಾಯ** **85-118**

**ಯಾತ್ರೆಯ ಪೂರ್ವಸಿದ್ಧತೆಗಳು ಮತ್ತು ಯಾತ್ರಾರಂಭ**

ಶೃಂಗೇರಿಯ ಸಮಾವೇಶ 86 ಶೃಂಗೇರಿಯ ಸಮಾವೇಶದ ನಿರ್ಣಯಗಳು 86 ಜಪದಕಟ್ಟೆ ಯಲ್ಲೊಂದು ಮೀಟಿಂಗು 88 ವೈಟ್‌ಫೀಲ್ಡ್‌ನಲ್ಲಿ ನಡೆದ ಸಮಾವೇಶ 89 ರಥಯಾತ್ರೆಯ ವಿವರಗಳು 91 ಸ್ವಾಮಿಗಳು ಮಂಡಿಸಿದ ರಥಯಾತ್ರೆಯ ರೂಪರೇಖೆಗಳು 92 ವೇದಾಂತ ಭಾರತಿಯ ಕಾರ್ಯಕರ್ತರ ಮನವಿ 95 ಆರಾಧ್ಯದೇವರನ್ನು ಪ್ರಾರ್ಥಿಸಿದ ವಿಚಾರ 96 ಉತ್ತರಾಧಿಕಾರಿ ಶಿಷ್ಯಸ್ವೀಕಾರ ಮಹೋತ್ಸವ 96 ಪ್ರಮುಖವಾದ ಪುಣ್ಯಾಚರಣೆಗಳು 97 ಕೌಪೀನವಂತಃ ಖಲು ಭಾಗ್ಯವಂತಃ 97 ಕಾಷಾಯವಸ್ತ್ರ ಮತ್ತು ದಂಡಕಮಂಡಲ ಅನುಗ್ರಹ 98 ಪುರೋಹಿತರಿಂದ ವಿವರಣೆಗಳು 99 ಪ್ರಣವೋಪದೇಶ ಮತ್ತು ಮಹಾ ವಾಕ್ಯೋಪದೇಶ 101 ಯೋಗಪಟ್ಟಪ್ರದಾನ ಮತ್ತು ನಾಮಪ್ರದಾನ 101 ಅಭಿವಂದನ ಮತ್ತು ಆಶೀರ್ವಚನ ಸಮಾವೇಶ 102 ಪರಂಪರೆಯನ್ನು ಬೆಳಗಿಸುವ ಶಿಷ್ಯರು 103 ಸ್ವಾಮಿ ಮಹಾರಾಜರ ವ್ಯಾಕುಲತೆ 103 ತನ್ನ ತ್ಯಾಗೀಸಂತಾನದಲ್ಲಿ ಭಗವಂತನಿಗೆ ಹೆಚ್ಚು ನಂಬಿಕೆ 104 ಆಂದೋಳನರೂಪದ ಕಾರ್ಯಕ್ರಮಗಳು 104 ಪುಣ್ಯವಂತರಿಗೆ ಸನ್ಮಾನ 105 ಆತ್ಮಾ ನುಸಂಧಾನಕ್ಕೆ ಪೂರಕವಾಗುವ ಸನ್ಯಾಸಜೀವನ 105 ದೊಡ್ಡಗುರುಗಳ ಆಶೀರ್ವಚನ 106 ಬ್ರಹ್ಮಚರ್ಯದಿಂದ ಸನ್ಯಾಸದವರೆಗೆ 107 ಹರಿದ್ವಾರದಲ್ಲಿ ಪೂರ್ವಸಿದ್ಧತೆಗಳು 108 ಸಾರಿಗೆವ್ಯವಸ್ಥೆಯ ಹೊಂದಾಣಿಕೆ 109 ಎಸ್ಕಾರ್ಟ್‌ಸೌಲಭ್ಯ ದೊರೆತ ಅಚ್ಚರಿ 110 ಪೋಲೀಸ್ ಅಧಿಕಾರಿಗಳ ಆಗಮನ 110 ನಾವು ಪರೀಕ್ಷಿಸಲು ಬಂದವರಲ್ಲ 111 ಕೇಂದ್ರದ ಮೆಚ್ಚುಗೆಗಳಿಸಿದ ನಾಲ್ಕು ಮಹಾಭಿಯಾನಗಳು 112 ದೆಹಲಿಯಲ್ಲಿ ವೇದಾಂತ ಭಾರತಿಯ ರಾಯಭಾರಿಗಳು 114 ಶಾಂಕರಸ್ತೋತ್ರಗಳ ಲೋಕೋಪಕಾರ 115 ಮಠಗಳು ಎದ್ದುನಿಲ್ಲಬೇಕು 116 ಗಿರಿನಗರದ ಮಂಜುನಾಥರ ಗುರುಭಕ್ತಿ 117 ಗುರುಯಾತ್ರೆಗಾಗಿ ಬೀರೂರು ಮಂಜುನಾಥರ ಗುರುತರಯಾತ್ರೆ 117

**ನಾಲ್ಕನೆಯ ಅಧ್ಯಾಯ** **119-197**

**ಹರಿದ್ವಾರದಲ್ಲಿ ಮಾತೆಯರು ಮೊಳಗಿಸಿದ ಸೌಂದರ್ಯಲಹರಿಯ ವಿಜಯದುಂದುಭಿ**

ವಿದುಷಿಯರಾದ ಮಾತೆಯರು 119 ಸಂಪನ್ಮೂಲಮಾತೆಯರ ಯಾತ್ರಾತಂಡ 120 ಶಿವಮಹಿಮ್ನಸ್ತೋತ್ರ ಮತ್ತು ಗಂಗಾಷ್ಟಕ 121 ಹರಿದ್ವಾರವನ್ನು ಹೊಕ್ಕ ಕೊಲಂಬಸ್ 122 ಸ್ವಾಮಿಮಹಾರಾಜರ ಕಿವಿಮಾತು 123 ಸಾಧನಾಸದನದಲ್ಲಿ ಮಾಡಿದ ಪ್ರಯತ್ನ 123 ಸೂರತಗಿರಿ ಬಂಗಲೆ ಆಶ್ರಮ 124 ಪದ್ಮನಾಭರಿಗೆ ಶಾಲುಹೊದಿಸಿದ ಪ್ರಸಂಗ 125 ಶಿವರಾತ್ರಿಪೂಜೆಯ ಭಾಗ್ಯ 125 ಅಖಂಡಪರಮಧಾಮ 126 ತೀನ್‌ಪಾಂಡೆ ತೇರಹ್ ಚೂಲ್ಹಾ 127 ಸ್ತೋತ್ರಪಾರಾಯಣಕ್ಕೆ ಕೇಂದ್ರಗಳ ಸ್ಥಾಪನೆ 127 ಸದ್ಗುರುಗಳ ಕೃಪೆಯಿಂದ ಸುರೇಶರು ಜಯಶೀಲರಾದ ಪರಿ 129 ಇಪ್ಪತ್ತೈದು ಕೇಂದ್ರಗಳ ಸಂಸ್ಥಾಪನಾಚಾರ್ಯ 130 ರಾಣಿಗಲ್ಲಿಯಲ್ಲಿ ಸದ್ಗುರುಗಳ ಶಿಷ್ಯೆಯರು 131 ಕೇಂದ್ರಗಳತ್ತ ಮುಖಮಾಡಿದ ಮಾತೆಯರು 133 ಮಾತೆಯರು ಹಿಗ್ಗಿಹೀರೇಕಾಯಾದ ವಿಚಾರ 134 ಸಾಧನಾಸದನ 134 ಗಂಗಾತೀರದ ಪಾವನಸಭಾಂಗಣ 136 ಚಕ್ರಗಳು, ಕುಂಡಲಿನೀಶಕ್ತಿ ಮತ್ತು ಶ್ರೀವಿದ್ಯಾ 138 ಪಂಚಪೀಠಗಳ ವೈಭವ 141 ಉದಾಸೀನ್‌ಸಂಸ್ಕೃತಮಹಾವಿದ್ಯಾಲಯ, ಗುರುಮಂಡಲ ಆಶ್ರಮ, ಋಷಿಕುಲಬ್ರಹ್ಮಚರ್ಯಾಶ್ರಮ, ಗರೀಬ್‌ದಾಸೀಸಂಸ್ಕೃತವಿದ್ಯಾಲಯ, ಶ್ರೀದಂಡಿ ಸೇವಾಶ್ರಮ 141 ಮಹಿಳಾಕಾಲೇಜಿನಲ್ಲಿ ವಿಶೇಷೋಪನ್ಯಾಸ 142 ಪೈಲಟ್‌ಬಾಬಾ ಆಶ್ರಮ 143 ಗೀತಾಕುಟೀರದಲ್ಲಿ ಬ್ರಹ್ಮಮಾನಸಪುತ್ರರು 145 ಮೃದುಲಾದೀದಿ ಕೇಂದ್ರ 146 ಅಖಂಡಪರಮಧಾಮದ ವೈಭವ 147 ಉತ್ತರದೇಶದ ಅನ್ನಾಹಾರಗಳು 148 ಮಾತೆಯರ ದಕ್ಷಿಣಾಮೂರ್ತಿಸ್ತೋತ್ರವೈಭವ 149 ಹಲವುರಾಜ್ಯಗಳಿಗೆ ಹಬ್ಬಿದ ಸ್ತೋತ್ರಗಾಯನ 151 ಅಮೃತವಚನದ ಗುಣಗೌರವ 151 ಮಾತೆಯರು ಮಾಡಿದ ಅನುಷ್ಠಾನಗಳು 153 ಬೃಂದಾವನದ ಸನ್ಯಾಸಿನಿ ಮತ್ತು ರಾಜಸ್ತಾನದ ಗಾರ್ಗಿ 154 ಸಪ್ತರ್ಷಿಆಶ್ರಮ - ಸಪ್ತಗಿರಿಆಶ್ರಮ - ಉಮಾಮಹೇಶ್ವರಟ್ರಸ್ಟ್ ಆಶ್ರಮ 156 ಬಾರಿಸು ಸಂಸ್ಕೃತಡಿಂಡಿಮವ 157 ಭಗವಾನ್‌ದಾಸ್‌ಆದರ್ಶಸಂಸ್ಕೃತ ಮಹಾವಿದ್ಯಾಲಯ - ಜಗದ್ಗುರುಆಶ್ರಮ - ಶಂಕರಾಶ್ರಮ ಬಾಲವಿದ್ಯಾಮಂದಿರ 158 ಸೂರತಗಿರಿಆಶ್ರಮದಲ್ಲೊಂದು ಕೇಂದ್ರ 160 ಅಖಂಡಪರಮಧಾಮ ಮತ್ತು ವೇದಾಂತಆಶ್ರಮ 161 ಪ್ರತಿನಿತ್ಯದ ಸ್ತೋತ್ರಚಿಂತನ 161 ಗೀತಾವಿಜ್ಞಾನಾಶ್ರಮ 162 ಗಣೇಶಾಶ್ರಮ 164 ಶಿವಮಹಿಮ್ನಸ್ತೋತ್ರದ ಸಾರಾಂಶ 165 ಭಾರತೀಸಂಸ್ಕೃತವಿದ್ಯಾಲಯ - ಸಂತೋಷೀಮಾತಾದೇವಾಲಯ - ಶಕುಂತಲಾಶಾಸ್ತ್ರೀ ಮಹಿಳಾಕಾಲೇಜು - ಗಣೇಶಾನಂದಗಿರಿಮಹಾರಾಜರಮಠ 166 ಮಾತೆಯರ ಕಣ್ಣಲ್ಲಿ ಆನಂದಾಶ್ರುಗಳು 168 ಭೂಮಾಶಕ್ತಿಪೀಠಾಶ್ರಮ – ರಾಮೇಶ್ವರಆಶ್ರಮ ಶಾಂತಿಮಂದಿರ – ಜಗಜೀತ್‌ಪುರ್‌ಹೌಸ್ ಬಸ್ತೀರಾಂಸಂಸ್ಕೃತವಿದ್ಯಾಲಯ – ಗೀತಾಮಂದಿರ 169 ಶಂಕರಾಶ್ರಮ 171 ತುಲಸೀ ಮಾನಸರಾಮಮಂದಿರ 171 ಹರಿಗಿರಿನಿರಂಜನಾಶ್ರಮ 172 ಉಜ್ಜಯಿನಿಪಟ್ಟಣದವರಿಗೆ ಸೌಂದರ್ಯಲಹರಿಯ ಬೋಧನೆ 173 ಪರಮಾರ್ಥನಿಕೇತನ 174

ಮೊದಲನೆಯ ಅಧ್ಯಾಯ

# ಶ್ರೀಯೋಗಾನಂದೇಶ್ವರಸರಸ್ವತೀಮಠದ ಪೂರ್ವೇತಿಹಾಸ

## ಅರ್ಕೇಶ್ವರನ ಪುಣ್ಯತೀರ್ಥ

ಶ್ರೀಯೋಗಾನಂದೇಶ್ವರಸರಸ್ವತೀಮಠಕ್ಕೆ 800 ವರ್ಷಗಳ ಇತಿಹಾಸವಿದೆ. ಶ್ರೀಯೋಗಾನಂದೇಶ್ವರಸರಸ್ವತಿಗಳೆಂಬ ಯತಿಗಳೇ ಆ ಮಠದ ಮೂಲಪುರುಷರಾಗಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಮೈಸೂರುಜಿಲ್ಲೆಯ ಮೂಲಕ ಹರಿದುಹೋಗುವ ಕಾವೇರೀನದಿಯ ತೀರದಲ್ಲಿ, ಯಡತೊರೆ ಎಂಬ ಹೆಸರಿನ ಪಟ್ಟಣವೊಂದಿತ್ತು. ಆ ಸ್ಥಳದಲ್ಲಿ ಕಾವೇರಿಯು ಎಡಕ್ಕೆ ತಿರುಗಿ ಹರಿದಿದೆಯಾದ್ದರಿಂದ ಆ ಪಟ್ಟಣಕ್ಕೆ ಯಡತೊರೆ ಎಂದು ಹೆಸರಾಗಿತ್ತು. ತೊರೆ ಎಂದರೆ ನದಿ ಎಂದರ್ಥ. ಯಡತೊರೆಯು ಅಂದಿನ ಕಾಲಕ್ಕೆ ಒಂದು ಬ್ರಾಹ್ಮಣ ಅಗ್ರಹಾರವೂ ಆಗಿದ್ದು, ಸುಸಂಪನ್ನವಾಗಿತ್ತು. ಅರ್ಕೇಶ್ವರ ಎಂಬ ಹೆಸರಿನ ಶಿವನ ಪುರಾಣ ಪ್ರಸಿದ್ಧವಾದ ದೇವಾಲಯವೊಂದಿತ್ತು. ಅರ್ಕ ಎಂದರೆ ಸೂರ್ಯ ಎಂದರ್ಥ. ಸೂರ್ಯನು ತನ್ನ ಮಗಳಾದ ಯಮುನೆಯೆಂಬಾಕೆಯನ್ನು ಮೋಹದ ಕಣ್ಣುಗಳಿಂದ ನೋಡಿದುದೇ ಕಾರಣವಾಗಿ, ಪಾಪಕ್ಕೆ ತುತ್ತಾದನು. ಅದರ ಪ್ರಾಯಶ್ಚಿತ್ತವಾಗಿ ಆ ಕ್ಷೇತ್ರದಲ್ಲಿ ಶಿವನನ್ನು ಪ್ರತಿಷ್ಠಾಪಿಸಿ, ಪೂಜಿಸಿ, ಪಾಪಮುಕ್ತನಾದನು. ಹೀಗೆ ಅರ್ಕನಿಂದ ಪ್ರತಿಷ್ಠಾಪಿತನಾದ ಶಿವನು ಅರ್ಕೇಶ್ವರನೆಂದು ಪ್ರಸಿದ್ಧನಾದನು. ಅರ್ಕನು ಕಾವೇರಿಯಲ್ಲಿ ಮಿಂದು ಮೇಲೆದ್ದ ತಾಣವು ಆಳವಾದ ಮಡುವಾಗಿ 'ಅರ್ಕಪುಷ್ಕರಿಣಿ' ಎಂಬ ಹೆಸರಿನಿಂದ ಖ್ಯಾತವಾಯಿತು. ಅರ್ಕೇಶ್ವರ ದೇವಾಲಯದಲ್ಲಿ ತ್ರಿಕಾಲಪೂಜಾದಿಗಳು ನಡೆಯುತ್ತಿದ್ದುವು, ಆಗಮೋಕ್ತವಾದ ವಿಶೇಷ ಉತ್ಸವಗಳೂ ಜರುಗುತ್ತಿದ್ದು, ಅದೊಂದು ಆಕರ್ಷಕ ಧಾರ್ಮಿಕಕೇಂದ್ರವಾಗಿತ್ತು.

## ಯೋಗಾನಂದೇಶ್ವರಸರಸ್ವತಿಗಳ ಆಗಮನ

ಅಂತಹ ಪುಣ್ಯತೀರ್ಥಕ್ಕೆ ಯೋಗಾನಂದೇಶ್ವರಸರಸ್ವತಿಗಳೆಂಬ ಮಹಾತ್ಮರು ಪರಮಹಂಸ ಪರಿವ್ರಾಜಕರಾಗಿ ಪಾದಬೆಳೆಸಿದರು. ಅವರು ಮೂಲತಃ ಶಾರದಾಪೀಠವೆನಿಸಿದ ಶೃಂಗೇರಿಯ ನಿವಾಸಿಗಳಾಗಿದ್ದರು; ವೇದಾಧ್ಯಯನಸಂಪನ್ನರಾಗಿದ್ದರು. ಬಾಲ್ಯದಿಂದಲೇ ವೈರಾಗ್ಯಶೀಲರಾಗಿದ್ದ ಅವರು, ಬ್ರಹ್ಮಚರ್ಯದಲ್ಲಿಯೇ ಇದ್ದುಕೊಂಡು, ಅನುಷ್ಠಾನಗಳನ್ನು

ಮಾಡುತ್ತ, ಶಿಷ್ಯರಿಗೆ ವೇದಾಧ್ಯಯನ ಮಾಡಿಸುತ್ತ ದಿನಗಳೆಯುತ್ತಿದ್ದರು. ತರುವಾಯ ಸನ್ಯಾಸದ ಇಚ್ಛೆಯು ತೀವ್ರವಾಗಿ, ಶೃಂಗೇರಿಯಲ್ಲಿಯೇ ಯಾರೋ ಯತಿವರ್ಯರಿಂದ ಸನ್ಯಾಸದೀಕ್ಷೆಯನ್ನು ಪಡೆದುಕೊಂಡು, ಯೋಗಾನಂದೇಶ್ವರಸರಸ್ವತಿಗಳೆನಿಸಿಕೊಂಡರು. ಅವರ ಪೂರ್ವಾಶ್ರಮ ನಾಮವೇನಿತ್ತೆಂಬುದು ಈಗ ತಿಳಿಯದಾಗಿದೆ.

ಸನ್ಯಾಸಾಶ್ರಮವನ್ನು ಪ್ರವೇಶಿಸಿದ ಬಳಿಕ ಯೋಗಾನಂದೇಶ್ವರಸರಸ್ವತಿಗಳು ಶೃಂಗೇರಿಯನ್ನು ತೊರೆದು, ಪರಮಹಂಸಪರಿವ್ರಾಜಕರಾಗಿ ಅಲ್ಲಿಂದ ಹೊರಟುಬಿಟ್ಟರು. ಯಾವುದಾದರೊಂದು ಪುಣ್ಯತೀರ್ಥದಲ್ಲಿ ಆಶ್ರಮವೊಂದನ್ನು ನಿರ್ಮಿಸಿಕೊಂಡು ತಪೋನಿರತರಾಗಬೇಕೆಂಬ ಹಂಬಲದಿಂದ ನಡೆದುಬರುತ್ತ, ಯಡತೊರೆಯನ್ನು ಹೊಕ್ಕರು. ದಕ್ಷಿಣಗಂಗೆಯೆನಿಸಿದ ಕಾವೇರೀನದಿಯ ಪಾವನಪರಿಸರ, ಅರ್ಕೇಶ್ವರಸ್ವಾಮಿಯ ಪವಿತ್ರವಾದ ಸನ್ನಿಧಾನ, ವೇದವಿದರಾದ ಬ್ರಾಹ್ಮಣರ ಅಗ್ರಹಾರ- ಈ ಮೊದಲಾದುವು ಅಲ್ಲಿ ಅವರನ್ನು ಸೆಳೆದುಕೊಂಡುವು. ಯಡತೊರೆಯ ಅಗ್ರಹಾರದ ಬ್ರಾಹ್ಮಣರು, ತಮ್ಮೂರಿಗೆ ಆಗಮಿಸಿದ ಸ್ವಾಮಿಗಳನ್ನು ಸ್ವಾಗತಿಸಿ, ಸತ್ಕರಿಸಿ, ತಮ್ಮಲ್ಲಿಯೇ ಇರಿಸಿಕೊಂಡರು. “ಇಂತಹ ಯತಿವರ್ಯರು ನಮ್ಮೂರಿನಲ್ಲಿಯೇ ಇದ್ದುಕೊಂಡು ನಮಗೆ ಮಾರ್ಗದರ್ಶನ ಮಾಡುತ್ತಿದ್ದರೆ ಎಷ್ಟು ಚೆನ್ನಾಗಿರುತ್ತದೆ” ಎಂಬ ಭಾವನೆ ಆ ಯಡತೊರೆ ಅಗ್ರಹಾರದ ಬ್ರಾಹ್ಮಣರ ಮನದಲ್ಲಿ ಮೂಡಿತು. ಆಮೇಲೆ ಅವರ ಒಪ್ಪಿಗೆಯನ್ನು ಪಡೆದು, ಅರ್ಕೇಶ್ವರಸ್ವಾಮಿ ದೇವಾಲಯದ ಮಗ್ಗುಲಲ್ಲಿಯೇ ಒಂದು ಮಠವನ್ನು ಅವರಿಗಾಗಿ ನಿರ್ಮಿಸಿಕೊಟ್ಟರು. ಯೋಗಾನಂದೇಶ್ವರರು ಅಲ್ಲಿ ನೆಲೆಸಿದುದರ ಫಲವಾಗಿ ಅಲ್ಲಿನ ವೈದಿಕರು ನಡೆಸುತ್ತಿದ್ದ ಯಜ್ಞಯಾಗಾದಿಗಳಿಗೆ ಹೆಚ್ಚಿನ ಪ್ರೋತ್ಸಾಹವೂ ಮಾರ್ಗದರ್ಶನವೂ ಲಭ್ಯವಾಯಿತು. ಶಂಕರಾಚಾರ್ಯರ ತತ್ತ್ವವಿಚಾರಗಳನ್ನು ಕೂಡ ಅಗ್ರಹಾರದ ಬ್ರಾಹ್ಮಣರಿಗೆ ಸ್ವಾಮಿಗಳು ಬೋಧಿಸುತ್ತಿದ್ದರು.

## ನೀಲಕಂಠೇಶ್ವರ ಮತ್ತು ಪಟ್ಟಾಭಿರಾಮದೇವರು

ಯೋಗಾನಂದೇಶ್ವರಸರಸ್ವತಿಗಳು ನೀಲಕಂಠೇಶ್ವರನನ್ನೂ ಪಟ್ಟಾಭಿರಾಮನನ್ನೂ ಮಠದ ಆರಾಧ್ಯದೇವರುಗಳಾಗಿ ಮಾಡಿಕೊಂಡರು. ಹಾಗೆ ಮಾಡಿಕೊಂಡುದರಲ್ಲಿ ಕೂಡ ವಿಶೇಷವಾದ ಅರ್ಥವಿದೆ. ಅದು ಶಂಕರಾಚಾರ್ಯರು ಬೋಧಿಸಿದ, ಹರಿಹರರ ನಡುವೆ ಭೇದವೆಣಿಸದ ಅದ್ವೈತದ ಸಮನ್ವಯತತ್ವಕ್ಕೆ ಅನುಗುಣವಾಗಿಯೇ ಇದೆ. ಅರ್ಕೇಶ್ವರನ ಕ್ಷೇತ್ರದಲ್ಲಿ ಮಠವಿರುವುದರಿಂದ, ನೀಲಕಂಠೇಶ್ವರ ಎಂಬ ನಾಮದಲ್ಲಿ ಶಿವನನ್ನು ಸ್ವೀಕರಿಸಿದರು. ಶಿವನ ಲೀಲಾಮೂರ್ತಿಗಳಲ್ಲಿ ನೀಲಕಂಠೇಶ್ವರ ಎಂಬುದೂ ಒಂದು. ಅಮೃತವನ್ನು ಪಡೆದುಕೊಳ್ಳಲು ದೇವತೆಗಳೂ ರಾಕ್ಷಸರೂ ಒಗ್ಗೂಡಿ ಕ್ಷೀರಸಾಗರವನ್ನು ಕಡೆದರೆಂಬುದು ಸರಿಯಷ್ಟೆ! ಆ ಹೊತ್ತಿನಲ್ಲಿ ವಿಷ ಉಕ್ಕಿಬಂದು ಜಗತ್ತೆಲ್ಲವೂ ತಲ್ಲಣಿಸಿ ಹೋಯಿತು. ಆಗ ಶಿವನು ಮುಂದೆ ಬಂದು, ಆ ವಿಷವನ್ನು ತಾನೇ ಕುಡಿದು, ಲೋಕದ ಸಂರಕ್ಷಣೆ ಮಾಡಿದನು. ಆ ವಿಷವನ್ನು ತನ್ನ ಕಂಠದಲ್ಲಿಯೇ ನಿಲ್ಲಿಸಿಕೊಂಡು ವಿಷಕಂಠೇಶ್ವರ ಅಥವಾ ನೀಲಕಂಠೇಶ್ವರನೆನಿಸಿಕೊಂಡನು. ವಿಷದ ಹೊಡೆತದಿಂದ ಜಗತ್ತನ್ನು ಸಂರಕ್ಷಣೆ

ಮಾಡಿದ ನೀಲಕಂಠೇಶ್ವರನನ್ನು ಆರಾಧಿಸಿದರೆ, ನಾವೂ ಬದುಕಿನ ಸಂಕಟಗಳಿಂದ ಪಾರಾಗಬಹುದು. ಮೈಸೂರುಜಿಲ್ಲೆಯ ನಂಜನಗೂಡು ಎಂಬ ಪಟ್ಟಣದ ಕಪಿಲಾನದಿಯ ತೀರದಲ್ಲಿರುವ ನಂಜುಂಡೇಶ್ವರನ ಪುಣ್ಯತೀರ್ಥವನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ನಂಜು ಎಂದರೆ ವಿಷ ಎಂದರ್ಥ. ನಂಜನ್ನು ಉಂಡ ಈಶ್ವರನು ಅಲ್ಲಿ ನಂಜುಂಡೇಶ್ವರನೆನಿಸಿಕೊಂಡಿದ್ದಾನೆ.

ಯಡತೊರೆಗೆ ಸು. 15 ಕಿಲೋಮೀಟರು ದೂರದಲ್ಲಿ ಚುಂಚನಕಟ್ಟೆ ಎಂಬ ಕ್ಷೇತ್ರವಿದೆ. ಆ ಕ್ಷೇತ್ರವು ಕೂಡ ಕಾವೇರಿನದಿಯ ದಂಡೆಯಲ್ಲಿಯೇ ಇದ್ದು ಪುರಾಣಪ್ರಸಿದ್ಧವಾಗಿದೆ. ಅಲ್ಲಿ ಕೋದಂಡರಾಮದೇವರ ದೇವಾಲಯವೂ ಇದೆ. ಯೋಗಾನಂದೇಶ್ವರಸರಸ್ವತಿಗಳು, ಆ ಕ್ಷೇತ್ರದಲ್ಲಿಯೂ ತಪಸ್ಸುಮಾಡಿ ರಾಮಸಾಕ್ಷಾತ್ಕಾರವನ್ನು ಪಡೆದುಕೊಂಡವರಾಗಿದ್ದರು. ವನವಾಸದ ಬಳಿಕ ಶ್ರೀರಾಮನು ಪಟ್ಟಾಭಿಷಿಕ್ತನಾಗಿ ಪಟ್ಟಾಭಿರಾಮನೆನಿಸಿ ಅಯೋಧ್ಯೆಯ ಸಿಂಹಾಸನವನ್ನೇರಿ, ಭಕ್ತರನ್ನು ಪರಿಪಾಲಿಸಿದನು. ಯೋಗಾನಂದೇಶ್ವರರು ನೀಲಕಂಠೇಶ್ವರನ ಜೊತೆಗೆ ಭಕ್ತಪಾಲಕನಾದ ಆ ಪಟ್ಟಾಭಿರಾಮನನ್ನೂ ಆರಾಧ್ಯದೇವರಾಗಿಸಿಕೊಂಡರು. 1216ರಲ್ಲಿ ಯಡತೊರೆಯಲ್ಲಿ ಮಠವು ಸ್ಥಾಪನೆಗೊಂಡು, ಯೋಗಾನಂದೇಶ್ವರರು ಅದರ ಪೀಠಾಧಿಪತಿಗಳಾಗಿ, 55 ವರ್ಷಗಳ ಕಾಲ ಭಕ್ತಿಸಾಮ್ರಾಜ್ಯವನ್ನಾಳಿ, ಯಡತೊರೆಯ ಮಠದಲ್ಲಿಯೇ ಜೀವಂತಸಮಾಧಿಯನ್ನು ಸ್ವೀಕರಿಸಿದರು.

## ರಾಮಬ್ರಹ್ಮಾನಂದಸರಸ್ವತಿಗಳು

ಯೋಗಾನಂದೇಶ್ವರಸರಸ್ವತಿಗಳ ತರುವಾಯ ಅವರ ಶಿಷ್ಯರಾಗಿ, ರಾಮಬ್ರಹ್ಮಾನಂದ ಸರಸ್ವತಿಗಳು (ಸು.1271-1326) ಪಟ್ಟವೇರಿದರು. ಅವರೊಬ್ಬ ಜೀವನ್ಮುಕ್ತರೂ ಪವಾಡಪುರುಷರೂ ಆಗಿದ್ದರು. ಯಡತೊರೆಯ ಮಠದಲ್ಲಿಯೂ, ಅರ್ಕೇಶ್ವರನ ಸನ್ನಿಧಾನದಲ್ಲಿಯೂ ಮಾತ್ರವಲ್ಲದೆ ಅವರು ಆಗಾಗ ಚುಂಚನಕಟ್ಟೆಯ ರಾಮದೇವರಕ್ಷೇತ್ರಕ್ಕೂ ಹೋಗಿ ತಪೋನಿರತರಾಗುತ್ತಿದ್ದರು. ಅದರ ಫಲವಾಗಿ ಅವರಿಗೆ ಶ್ರೀರಾಮನ ಸಾಕ್ಷಾತ್ಕಾರವಾಯಿತು. ಒಮ್ಮೆ ಶ್ರೀರಾಮನೇ ಅವರ ಕನಸಿನಲ್ಲಿ ಕಾಣಿಸಿಕೊಂಡು, “ನಾನು ಇಲ್ಲಿರುವ ತುಳಸೀವನದಲ್ಲಿ ಸಾಲಿಗ್ರಾಮರೂಪದಲ್ಲಿ ನೆಲೆಸಿದ್ದೇನೆ, ನೀನು ಸಂಗ್ರಹಿಸಿಕೊಂಡು ಆರಾಧಿಸು” ಎಂದು ಆಜ್ಞಾಪಿಸಿದನು. ಅದರಂತೆ ರಾಮಬ್ರಹ್ಮಾನಂದರು, ಚುಂಚನಕಟ್ಟೆಯ ರಾಮದೇವಾಲಯದ ತುಳಸೀತೋಟದಲ್ಲಿ ಹುಡುಕಲಾಗಿ, ಆ ಸಾಲಿಗ್ರಾಮವು ಅವರ ಕೈಸೇರಿತು. ಅದನ್ನು ಅವರು ತಮ್ಮ ನಿತ್ಯಪೂಜೆಯ ದೇವರುಗಳೊಡನೆ ಕೂಡಿಸಿಕೊಂಡರು. ಸಹಸ್ರಾರ್ಕಸಾಲಿಗ್ರಾಮ, ರಾಮಸಾಲಿಗ್ರಾಮ ಎಂಬ ಹೆಸರಿನಲ್ಲಿ ಇಂದಿಗೂ ಯೋಗಾನಂದೇಶ್ವರಮಠಪರಂಪರೆಯಲ್ಲಿ ಅದರ ಪೂಜೆಯು ಮುಂದುವರಿಯುತ್ತಿದೆ.

## ಹೊಳೆನರಸೀಪುರದಲ್ಲಿ ಶಾಖಾಮಠ

ಹೀಗೆಯೇ ಇರುವಲ್ಲಿ, ಇಂದಿನ ಹಾಸನಜಿಲ್ಲೆಯ ಹೊಳೆನರಸೀಪುರ ಎಂಬ ಪಟ್ಟಣದ ಭಕ್ತರು, ರಾಮಬ್ರಹ್ಮಾನಂದಸ್ವಾಮಿಗಳನ್ನು ಆಹ್ವಾನಿಸಿ, ಭಕ್ತಿಯಿಂದ ತಮ್ಮೂರಿಗೆ ಬರಮಾಡಿಕೊಂಡರು. ಅವರ ಪಾದಪೂಜಾದಿಗಳನ್ನು ನೆರವೇರಿಸಿದಬಳಿಕ ಆ ಭಕ್ತರು, ಯತಿವರ್ಯ

ರನ್ನು ಕುರಿತು, "ಸ್ವಾಮಿ, ಇದು ಹೇಮಾವತಿನದಿಯತೀರದ ಪವಿತ್ರ ಪಟ್ಟಣವಾಗಿದೆ. ಪುರಾಣಪ್ರಸಿದ್ಧವಾದ ನರಸಿಂಹಸ್ವಾಮಿಯ ದೇವಾಲಯವಿದೆ. ಆದರೆ ಮಠವಾವುದೂ ಇಲ್ಲಿಲ್ಲ. ತಾವು ಒಪ್ಪಿದರೆ ನಾವು ಇಲ್ಲೊಂದು ಮಠವನ್ನು ಕಟ್ಟಿಸುತ್ತೇವೆ. ತಾವು ಆಗಾಗ ಇಲ್ಲಿಗೂ ಪಾದಬೆಳೆಸಿ ನಮ್ಮನ್ನು ಆಶೀರ್ವದಿಸುತ್ತಿರಬೇಕು" ಎಂದು ಬೇಡಿಕೊಂಡರು. ಸ್ವಾಮಿಗಳು ಒಪ್ಪಿಗೆ ಕೊಟ್ಟರು. ಅದರಂತೆ ಹೊಳೆನರಸೀಪುರದಲ್ಲಿ ಯೋಗಾನಂದೇಶ್ವರ ಸರಸ್ವತೀಮಠದ ಶಾಖೆಯೊಂದು ನಿರ್ಮಾಣವಾಯಿತು. ಮಠದ ಆವರಣದಲ್ಲಿಯೇ ನೀಲಕಂಠೇಶ್ವರನ ಮತ್ತು ಪಟ್ಟಾಭಿರಾಮದೇವರಪಂಚಾಯತನ ದೇವಾಲಯಗಳ ನಿರ್ಮಾಣವೂ ಆಯಿತು. ರಾಮಸೀತಾಲಕ್ಷ್ಮಣಭರತಶತ್ರುಘ್ನಹನುಮಂತರೆಲ್ಲರೂ ಒಂದೇ ತಾಣದಲ್ಲಿ ಪ್ರತಿಷ್ಠಾಪನೆಗೊಂಡರೆ ಅದನ್ನು 'ರಾಮಪಂಚಾಯತನ' ಎಂದು ಕರೆಯು ತ್ತಾರೆ. ತರುವಾಯ ಅನ್ಯಭಕ್ತರು, ನೀಲಕಂಠೇಶ್ವರನ ಜೊತೆಗೆ ದೇವಿಯೂ ಇರಬೇಕೆಂದು ಪ್ರತ್ಯೇಕ ಗುಡಿಯಲ್ಲಿ ಪಾರ್ವತೀದೇವಿಯ ಸನ್ನಿಧಾನವನ್ನೂ ನಿರ್ಮಿಸಿದರು. ಅಷ್ಟಾದ ಬಳಿಕ ರಾಮಬ್ರಹ್ಮಾನಂದರು, ಯಡತೊರೆಯ ಮಠದಲ್ಲಿ ಮಾತ್ರವಲ್ಲದೆ, ಹೊಳೆನರಸೀಪುರದ ಮಠದಲ್ಲಿಯೂ ಆಗಾಗ ಬಿಡಾರಮಾಡುತ್ತ ಭಕ್ತರನ್ನು ಆಶೀರ್ವದಿಸುತ್ತಿದ್ದರು. ರಾಮಬ್ರಹ್ಮಾ ನಂದರು ತಮ್ಮಕಾಲಕ್ಕೆ ದ್ವಿಭುಜಪಟ್ಟಾಭಿರಾಮನ ಬದಲಾಗಿ ಚತುರ್ಭುಜಪಟ್ಟಾಭಿರಾಮ ನನ್ನು, ಮಠದ ಗುರುಗಳು ಪೂಜಿಸುವ ಸಿಂಹಾಸನಪೀಠದಮೂರ್ತಿಯಾಗಿ ಮತ್ತು ಉತ್ಸವಮೂರ್ತಿಯಾಗಿ ಆರಾಧ್ಯದೇವರನ್ನಾಗಿ ಮಾಡಿಕೊಳ್ಳುವಲ್ಲಿ ಯಾವ ಕಾರಣವು ಕೂಡಿಬಂದಿತು ಎಂಬುದನ್ನು ಊಹಿಸುವುದು ಕಷ್ಟ. 'ಅಧ್ಯಾತ್ಮರಾಮಾಯಣ'ದಲ್ಲಿ ಬಂದಿರುವ ವರ್ಣನೆ ಮತ್ತು ರಾಮದೇವರ ಕಡೆಯಿಂದ ಬಂದಿರಬಹುದಾದ ಪ್ರೇರಣೆಗಳೇ ಕಾರಣವಾಗಿರಬಹುದು ಎಂದು ನಾವು ಭಾವಿಸಬೇಕಾಗಿದೆ. ಅದಕ್ಕೆ ಪೂರಕವಾಗಿ ಒಂದು ಪವಾಡವೂ ನಡೆದಿದೆ.

## ದ್ವಿಭುಜರಾಮನು ಚತುರ್ಭುಜರಾಮನಾದ ಪವಾಡ

ಕಾಲಕ್ರಮದಲ್ಲಿ ರಾಮಬ್ರಹ್ಮಾನಂದರು ಹೊಳೆನರಸೀಪುರದ ಮಠದಲ್ಲಿ ರಾಮದೇವರ ಉತ್ಸವಾದಿಗಳಿಗೆ ಅನುಕೂಲವಾಗುವಂತೆ, ಒಂದು ಉತ್ಸವಮೂರ್ತಿಯನ್ನು ನಿರ್ಮಿಸ ಬೇಕೆಂದು ಸಂಕಲ್ಪಿಸಿದರು. ಅದಕ್ಕಾಗಿ ಕಂಚುಗಾರರನ್ನು ಬರಮಾಡಿಕೊಂಡು, ಅವರಿಗೆ ಎಲ್ಲ ಏರ್ಪಾಡುಗಳನ್ನೂ ಮಾಡಿಕೊಟ್ಟರು. "ಮಠದ ಆರಾಧ್ಯಮೂರ್ತಿಯು ದ್ವಿಭುಜಪಟ್ಟಾಭಿ ರಾಮನಾಗಿದ್ದಾನೆ; ಅದರಂತೆ ಉತ್ಸವಮೂರ್ತಿಗೂ ಎರಡು ಭುಜಗಳೇ ಇರಬೇಕು" ಎಂದು ಸ್ವಾಮಿಗಳು ನಿಶ್ಚಯಿಸಿ, ಹಾಗೆಯೇ ಕಂಚುಗಾರರಿಗೆ ಸೂಚನೆಯಿತ್ತರು. ಕಂಚುಗಾರರು ಎರಡು ತೋಳುಗಳಿಂದ ಕೂಡಿದ ರಾಮದೇವರನ್ನು ಪಂಚಲೋಹದಿಂದ ಅಚ್ಚುಕಟ್ಟಾಗಿ ಎರಕಹೊಯ್ದರು. ತರುವಾಯ ಅಚ್ಚಿನಿಂದ ಬಿಡಿಸಿನೋಡಿದರೆ, ಆ ರಾಮವಿಗ್ರಹವು ಎರಡು ತೋಳುಗಳಿಗೆ ಬದಲಾಗಿ ನಾಲ್ಕುತೋಳುಗಳಿಂದ ರಾರಾಜಿಸುತ್ತಿತ್ತು. ಆ ಪವಾಡವನ್ನು ಕಂಡು ಕಂಚುಗಾರರು ವಿಸ್ಮಯಾಭಿಭೂತರಾಗಿ, ಆ ಸಂಗತಿಯನ್ನು ರಾಮಬ್ರಹ್ಮಾನಂದರಲ್ಲಿ ಅರಿಕೆಮಾಡಿಕೊಂಡರು. ಅದನ್ನು ಕಣ್ಣಾರೆ ಕಂಡ ರಾಮಬ್ರಹ್ಮಾನಂದರೂ, ಮಿಕ್ಕವರೂ

ಮೂಕವಿಸ್ಮಿತರಾದರು. ಇನ್ನೊಮ್ಮೆ ಎರಕಹೊಯ್ದು ಹೊರತೆಗೆದಾಗಲೂ ಚತುರ್ಭುಜ ರೂಪವೇ ಒಡಮೂಡಿತು. ದ್ವಿಭುಜಪಟ್ಟಾಭಿರಾಮನೇ ನಮ್ಮ ಆರಾಧ್ಯಮೂರ್ತಿಯಾಗಿ ರುವಾಗ, ಅವನ ಉತ್ಸವಮೂರ್ತಿಯೂ ದ್ವಿಭುಜರೂಪವಾಗಿಯೇ ಇರಬೇಕೆಂಬುದು ಸೂಕ್ತವಾಗಿಯೇ ಇದೆ; ಆದರೆ ಶ್ರೀರಾಮನ ಇಚ್ಛೆಯಂತೆಯೇ ಚತುರ್ಭುಜರೂಪವನ್ನು ತಾಳಿಕೊಂಡಿದೆ ಎಂಬುದಾಗಿ ಸ್ವಾಮಿಗಳು ತಮ್ಮ ಅಂತರಂಗದಲ್ಲಿ ಅರಿತುಕೊಂಡರು. ದೇವಾಲಯದ ಮೂರ್ತಿ ದ್ವಿಭುಜವೇ ಇರಲಿ, ಸಿಂಹಾಸನಮೂರ್ತಿ ಮತ್ತು ಉತ್ಸವ ಮೂರ್ತಿಗಳು ಚತುರ್ಭುಜವೇ ಇರಲಿ ಎಂದು ಸ್ವಾಮಿಗಳು ನಿರ್ಣಯಿಸಿಕೊಂಡರು. ಅದರಂತೆ ಹೊಳೆನರಸೀಪುರಮಠದ ಸಿಂಹಾಸನಪೀಠದಮೂರ್ತಿ ಮತ್ತು ಉತ್ಸವ ಮೂರ್ತಿ ಶ್ರೀರಾಮನು ಚತುರ್ಭುಜನೇ ಆಗಿಬಿಟ್ಟನು.

ಮಹಾವಿಷ್ಣುವು ತನ್ನ ಏಳನೆಯ ಅವತಾರದಲ್ಲಿ ಶ್ರೀರಾಮನಾಗಿ, ಕೌಸಲ್ಯೆಯ ಗರ್ಭದಿಂದ ಅವತರಿಸಿದಾಗ, ಚತುರ್ಭುಜನಾಗಿಯೇ ಇದ್ದನೆಂದು 'ಅಧ್ಯಾತ್ಮ ರಾಮಾಯಣ'ದಲ್ಲಿ ವರ್ಣಿಸಲಾಗಿದೆ. ಆ ಸಂದರ್ಭದಲ್ಲಿ ಅವನು ಸಾವಿರಸೂರ್ಯರ ಕಾಂತಿಯಿಂದ ಕಂಗೊಳಿಸುತ್ತಿದ್ದನು. ನೀಲವರ್ಣದ ಕನ್ನೈದಿಲೆಹೂವಿನ ಬಣ್ಣದಂತೆ ಅವನ ಶರೀರವು ಹೊಳೆಯುತ್ತಿತ್ತು. ಕಿರೀಟವೇ ಮೊದಲಾದ ವಿವಿಧ ಆಭರಣಗಳಿಂದ ಅವನು ಶೋಭಾಯಮಾನನಾಗಿದ್ದನು. ಆ ಸ್ವರೂಪವನ್ನು ಕಂಡು ಕೌಸಲ್ಯಾದೇವಿಯು ಆಶ್ಚರ್ಯ ಚಕಿತಳಾದಳು. ಆ ಸ್ವಾಮಿಯನ್ನು ಕುರಿತು "ಎಲೈ ದೇವದೇವನೇ, ನೀನು ನಾಶರಹಿತನೂ ಅನಂತನೂ ಪರಿಪೂರ್ಣನೂ ಪುರುಷೋತ್ತಮನೂ ಆದ ಪರಮಾತ್ಮನಾಗಿದ್ದೀಯೆ. ನಿನ್ನ ಈ ರೂಪವೇ ಯಾವಾಗಲೂ ನನ್ನ ಚಿತ್ತದಲ್ಲಿ ನೆಲೆಗೊಳ್ಳಲಿ. ಜಗತ್ತನ್ನೇ ಮೋಹಿಸುವ ನಿನ್ನ ಮಾಯೆಯು ನನ್ನನ್ನು ಮುಟ್ಟದೆ ಇರಲಿ. ಆದರೆ ಸದ್ಯಕ್ಕೆ ಹೇ ಸ್ವಾಮಿಯೇ, ಅಲೌಕಿಕವಾದ ನಿನ್ನ ರೂಪವನ್ನು ಉಪಸಂಹಾರಮಾಡಿಕೋ. ನನಗೆ ಮಹದಾನಂದವನ್ನುಂಟುಮಾಡುವ, ಸುಕೋಮಲವಾದ ನಿನ್ನ ಶಿಶುಭಾವವನ್ನು ನನಗೆ ತೋರಿಸು. ನಿನ್ನನ್ನು ಅಪ್ಪಿ ಮುದ್ದಾ ಡುತ್ತ, ನಿನ್ನ ಮಾತುಗಳನ್ನು ಆಲಿಸುತ್ತ, ಭಯಂಕರವಾದ ಈ ಸಂಸಾರಸಾಗರವನ್ನು ನಿನ್ನ ಕೃಪೆಯಿಂದ ದಾಟಿಬಿಡುತ್ತೇನೆ ಸ್ವಾಮಿ" ಎಂದು ಪ್ರಾರ್ಥಿಸಿದಳು.

ಆಗ ಶ್ರೀರಾಮನು "ಪವಿತ್ರಾತ್ಮಳಾದ ಮಾತೆಯೇ, ನೀನು ಈ ಹಿಂದೆ ಆಚರಿಸಿದ ತಪಸ್ಸಿನ ಫಲವಾಗಿಯೇ ನಾನು ನಿನಗೆ ಮಗನಾಗಿ ಅವತರಿಸಿದ್ದೇನೆ. ನಿನ್ನ ಹೊರತಾಗಿ ಈ ನನ್ನ ರೂಪವನ್ನು ಬೇರಾರೂ ನೋಡಲಾರರು. ಈ ನನ್ನ ದರ್ಶನವು ಮೋಕ್ಷಕ್ಕೆ ಕಾರಣವಾಗಿದೆ. ಈಗ ನೀನು ಹೇಳಿದಂತೆಯೇ ಆಗಲಿ" ಎಂದು ತಿಳಿಸುತ್ತಾ, ಶಿಶುರೂಪ ವನ್ನು ತಾಳಿಕೊಂಡು ಅಳಲಾರಂಭಿಸಿದನು ಎಂಬುದಾಗಿ ಅಧ್ಯಾತ್ಮರಾಮಾಯಣ ದಲ್ಲಿ ವರ್ಣಿತವಾಗಿದೆ. ಯೋಗಾನಂದೇಶ್ವರಸರಸ್ವತೀಮಠದ ಆರಾಧ್ಯಮೂರ್ತಿ ಗಳಲ್ಲೊಬ್ಬನಾದ ಚತುರ್ಭುಜಪಟ್ಟಾಭಿರಾಮನ ಆರಾಧನೆಯು, ಮೋಕ್ಷದಾಯಕರೂಪ ವೆಂದು ಶ್ರೀರಾಮಚಂದ್ರನೇ ಹೇಳಿರುವುದನ್ನು, ಭಕ್ತಜನರಾದ ನಾವು ಮತ್ತೆ ಮತ್ತೆ ಸ್ಮರಿಸಬೇಕಾಗಿದೆ. ಅದರ ಅಗ್ಗಳಿಕೆಯನ್ನೂ ಮನದಂದುಕೊಳ್ಳಬೇಕಾಗಿದೆ.

## ದೊರೆಯತನಕ ದೂರು

ರಾಮಬ್ರಹ್ಮಾನಂದಸ್ವಾಮಿಗಳ ಕಾಲದಲ್ಲಿ ಸಂಪ್ರದಾಯವನ್ನು ಸರಿಯಾಗಿ ಅರಿಯದ ಹೊಳೆನರಸೀಪುರದ ಕೆಲವರು "ಚತುರ್ಭುಜರೂಪದಲ್ಲಿ ಪಟ್ಟಾಭಿರಾಮನ ಆರಾಧನೆ ನಮ್ಮ ನಾಡಿನಲ್ಲಿ ಎಲ್ಲಿಯೂ ಇಲ್ಲ. ಅದು ನಡೆಯುತ್ತಿದ್ದರೆ ಅದರಿಂದ ಪ್ರಜೆಗಳಿಗೆ ಹಾನಿಯೇ ಹೊರತು ಕ್ಷೇಮವುಂಟಾಗುವುದಿಲ್ಲ. ರಾಮಬ್ರಹ್ಮಾನಂದರು ಮನಬಂದಂತೆ ವರ್ತಿಸುತ್ತಿದ್ದಾರೆ. ಮೂಲಮೂರ್ತಿಯು ದ್ವಿಭುಜರೂಪವೇ ಆಗಿರುವಾಗ ಉತ್ಸವಮೂರ್ತಿಯೂ ಅದರಂತೆಯೇ ಇರಬೇಕಲ್ಲದೆ ಚತುರ್ಭುಜರೂಪದಲ್ಲಿರುವುದು ಸಲ್ಲದು" ಎಂದು ವಿಜಯನಗರದ ಅರಸನಿಗೆ ದೂರುಕೊಟ್ಟರು. ಆ ಹೊತ್ತಿನಲ್ಲಿ ಒಂದನೆಯ ಹರಿಹರ ರಾಯನು ಅಲ್ಲಿ ರಾಜ್ಯಭಾರಮಾಡುತ್ತಿದ್ದನೆಂದು ತಿಳಿಯಲು ಅವಕಾಶವಿದೆ. ಆದರೆ ಅರಸನು ದುಡುಕಲಿಲ್ಲ. "ಆ ಯತಿವರ್ಯರನ್ನೇ ಪ್ರಾರ್ಥಿಸಿ ಬರಮಾಡಿಕೊಂಡು ಅದರ ಸಾಧಕಬಾಧಕಗಳನ್ನು ವಿಚಾರಿಸಿ ಅರಿತುಕೊಳ್ಳೋಣ" ಎಂದು ನಿಶ್ಚಯಿಸಿದನು. ಆ ಹೊತ್ತಿನಲ್ಲಿ ರಾಮಬ್ರಹ್ಮಾನಂದರು ಹೊಳೆನರಸೀಪುರದಲ್ಲಿಯೇ ಇದ್ದರು. ಜನರು ದೂರು ಕೊಟ್ಟ ವಿಚಾರ, ಅರಸನು ನಿಶ್ಚಯಿಸಿಕೊಂಡ ವಿಚಾರ– ಮುಂತಾದ ಘಟನೆಗಳೆಲ್ಲವೂ ರಾಮಬ್ರಹ್ಮಾನಂದರಿಗೆ ಧ್ಯಾನಗೋಚರವಾದುವು. ದೊರೆಯು ಕರೆಕಳುಹಿಸುವುದಕ್ಕೆ ಮುನ್ನವೇ ಅವರು, ತಾವು ಗಳಿಸಿಕೊಂಡಿದ್ದ 'ಪಾದುಕಾಸಿದ್ಧಿ' ಎಂಬ ಯೋಗದ ಬಲದಿಂದ, ಕಣ್ಣುಮುಚ್ಚಿ ಬಿಡುವಷ್ಟರಲ್ಲಿ, ಹೊಳೆನರಸೀಪುರದಿಂದ ವಿಜಯನಗರದ ಮಹಾರಾಜನ ಅರಮನೆಯನ್ನು ಪ್ರವೇಶಿಸಿದರು.

ಭೀತವಿಸ್ಮಿತನಾದ ದೊರೆಯು, ರಾಮಬ್ರಹ್ಮಾನಂದರನ್ನು ಗೌರವಾದರಗಳಿಂದ ಬರಮಾಡಿಕೊಂಡು ಪೂಜಿಸಿ ಸತ್ಕರಿಸಿದನು. ತರುವಾಯ ಚತುರ್ಭುಜರೂಪದಲ್ಲಿ ಪಟ್ಟಾಭಿರಾಮದೇವರನ್ನು ಪೂಜಿಸುವ ವಿಚಾರದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಅವರ ಮುಂದಿಟ್ಟನು. ಆಗ ರಾಮಬ್ರಹ್ಮಾನಂದರು ಮಹಾವಿಷ್ಣುವು ರಾಮಾವತಾರದಲ್ಲಿ ಕೌಸಲ್ಯಾ ಮಾತೆಗೆ ಚತುರ್ಭುಜನಾಗಿ ದರ್ಶನವಿತ್ತುದನ್ನೂ, ಆ ರೂಪದ ಆರಾಧನೆಯು ಮೋಕ್ಷದಾಯಕವಾದುದೆಂದು ಶ್ರೀರಾಮನೇ ಹೇಳಿದುದನ್ನೂ, 'ಅಧ್ಯಾತ್ಮರಾಮಾಯಣ'ದಲ್ಲಿ ನಿರೂಪಿತವಾಗಿರುವ ಬಗೆಯಲ್ಲಿ ದೊರೆಗೆ ಬಣ್ಣಿಸಿ ಹೇಳಿದರು. ಚತುರ್ಭುಜರೂಪದಲ್ಲಿ ಶ್ರೀರಾಮನ ಆರಾಧನೆಯು ಸಲ್ಲದು ಎಂದು ಹೇಳಲು ಯಾವುದೇ ಶಾಸ್ತ್ರಗಳ ಆಧಾರವು ಕೂಡಾ ಇಲ್ಲವೆಂಬುದನ್ನೂ ಮನದಟ್ಟು ಮಾಡಿಕೊಟ್ಟರು. ಹೊಳೆನರಸೀಪುರದಲ್ಲಿ ಕಂಚುಗಾರರು ದ್ವಿಭುಜರೂಪದ ರಾಮವಿಗ್ರಹವನ್ನು ಎರಕಹೊಯ್ದಿದ್ದರೂ ಅದು ತನ್ನಿಂದ ತಾನೇ ಚತುರ್ಭುಜರೂಪವನ್ನು ತಾಳಿಕೊಂಡ ಅಭೂತಪೂರ್ವ ಘಟನೆಯನ್ನು ಕೂಡಾ ರಾಜನಿಗೆ ವಿವರಿಸಿ ಹೇಳಿದರು.

ಎಲ್ಲವನ್ನೂ ಶಾಂತಚಿತ್ತನಾಗಿ ಆಲಿಸಿದ ದೊರೆಯು, ರಾಮಬ್ರಹ್ಮಾನಂದರ ಭವ್ಯ ವ್ಯಕ್ತಿತ್ವದಿಂದ ವಿಶೇಷ ಪ್ರಭಾವಿತನಾದನು. ಅವರು ಪವಾಡಪುರುಷರೆಂಬುದನ್ನು ಅರ್ಥಮಾಡಿಕೊಂಡನು. ಚತುರ್ಭುಜರಾಮದೇವರ ಆರಾಧನೆಯನ್ನು ಒಪ್ಪಿಕೊಂಡನು.

ತಾನು ಸಂದೇಹಪಟ್ಟುದಕ್ಕೆ ಅವರಲ್ಲಿ ಕ್ಷಮಾಯಾಚನೆ ಮಾಡಿದನು. ಯೋಗಾನಂದೇಶ್ವರಸರಸ್ವತೀಮಠಕ್ಕೆ 'ಜಗದ್ಗುರು ಮಹಾಸಂಸ್ಥಾನ' ಎಂಬ ಮಾನ್ಯತೆಯನ್ನು ನೀಡಿದನು. ಛತ್ರಚಾಮರಗಳು, ಮಂಗಳವಾದ್ಯಗಳು, ಆನೆಕುದುರೆಗಳು ಮುಂತಾದ ರಾಜಮರ್ಯಾದೆಗಳೆಲ್ಲವೂ ಅವರಿಗೆ ಸಲ್ಲುವಂತೆ ಮಾಡಿದನು. ಬೇಕಾದಹಾಗೆ ಮಠಕ್ಕೆ ಭೂಮಿದಾನ ಮಾಡಿದನು. ಕೆಲವು ಗ್ರಾಮಗಳ ಆದಾಯವು ಮಠಕ್ಕೆ ಸಲ್ಲುವ ಏರ್ಪಾಡು ಮಾಡಿದನು. ತನ್ಮೂಲಕ ಮಠದ ಸಂಪತ್ತು ಅಭಿವೃದ್ಧಿಗೊಳ್ಳುವಂತೆ ಮಾಡಿದನು. ಅಷ್ಟೆಲ್ಲ ಆದ ಬಳಿಕ ರಾಮಬ್ರಹ್ಮಾನಂದರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಹೊಳೆನರಸೀಪುರಕ್ಕೆ ಬೀಳ್ಕೊಟ್ಟನು.

## ತತ್ತ್ವಸಂಗ್ರಹರಾಮಾಯಣ

ಹೀಗೆ ಮಹಿಮಾವಂತರಾದ ರಾಮಬ್ರಹ್ಮಾನಂದರು, ಯಡತೊರೆ ಮತ್ತು ಹೊಳೆನರಸೀಪುರಗಳೆಂಬ ಎರಡೂ ಪಟ್ಟಣಗಳಲ್ಲಿರುತ್ತ ಭಕ್ತರನ್ನು ಆಶೀರ್ವದಿಸಿದರು. ಆ ಯತಿವರ್ಯರ ಅಖಂಡವಾದ ರಾಮಭಕ್ತಿಯೇ ಕಾರಣವಾಗಿ, ಅವರು ಸಂಸ್ಕೃತಭಾಷೆಯಲ್ಲಿ ಶ್ಲೋಕರೂಪದಲ್ಲಿ 'ತತ್ತ್ವಸಂಗ್ರಹರಾಮಾಯಣ' ಎಂಬ ಹೆಸರಿನಲ್ಲಿ ರಾಮಾಯಣಮಹಾಕಾವ್ಯವೊಂದನ್ನು ರಚಿಸಿದ್ದಾರೆ. ಅದು ಅವರ ವಿದ್ವತ್ತಿಗೂ ಬಹುಮುಖಪ್ರತಿಭೆಗೂ ಸಾಕ್ಷಿಯಾಗಿದೆ. ರಾಮಬ್ರಹ್ಮಾನಂದರು ಹೊಳೆನರಸೀಪುರದ ಶಾಖಾಮಠದಲ್ಲಿ ಬಿಡಾರಮಾಡಿದ್ದ ಹೊತ್ತಿನಲ್ಲಿಯೇ ಅವರ ದೇಹತ್ಯಾಗವಾಯಿತು. ಹೀಗಾಗಿ ಅವರ 'ಅಧಿಷ್ಠಾನ'ವೆಂದು ಕರೆಯಲಾಗುವ ಅವರ ಸಮಾಧಿಮಂದಿರವು ಹೊಳೆನರಸೀಪುರದ ಮಠದಲ್ಲಿಯೇ ಇದೆ. ಅವರ ತರುವಾಯದ ಕಾಲದಲ್ಲಿ ಆ ಶಾಖಾಮಠವು ಅವರ ಹೆಸರಿನಲ್ಲಿಯೇ 'ಶ್ರೀರಾಮಬ್ರಹ್ಮಾನಂದಮಠ' ಎಂಬ ಹೆಸರಿನಿಂದ ಕರೆಯಲ್ಪಟ್ಟು ಈಗಲೂ ಹಾಗೆಯೇ ಕರೆಯಲ್ಪಡುತ್ತಿದೆ.

## ಮಾಧವಾನಂದಸರಸ್ವತಿಸ್ವಾಮಿಗಳು

ರಾಮಬ್ರಹ್ಮಾನಂದರ ತರುವಾಯ ಯಡತೊರೆಯ ಮಠಕ್ಕೆ ಉದ್ದಂಡಯೋಗಾನಂದಸರಸ್ವತಿಗಳೆಂಬ ಯತಿವರ್ಯರು ಮಠಾಧಿಪತಿಗಳಾದರು. ಅವರ ಬಗ್ಗೆ ಹೆಚ್ಚಿನ ಮಾಹಿತಿಗಳು ತಿಳಿದುಬಂದಿಲ್ಲ. ಅವರು ಹೊಳೆನರಸೀಪುರದ ಮಠಕ್ಕೆ ಹೋಗಿದ್ದ ಕಾಲದಲ್ಲಿ ಅಲ್ಲಿಯೇ ಬ್ರಹ್ಮೀಭೂತರಾದರು. ಮಠದಲ್ಲಿ ಸ್ಥಳಾವಕಾಶವು ಇರಲಿಲ್ಲವಾದ್ದರಿಂದ, ಹೇಮಾವತಿನದಿಯ ತೀರದಲ್ಲಿ ಅವರ ದೇಹವನ್ನು ಭೂಗತಗೊಳಿಸಿ, ಅಲ್ಲಿಯೇ ಅಧಿಷ್ಠಾನವೊಂದನ್ನು ನಿರ್ಮಿಸಿದರು. ಯಡತೊರೆಯ ಪ್ರಸ್ತುತ ಪೀಠಾಧಿಪತಿಗಳವರೆಗೆ 18 ಮಂದಿ ಯತಿಪುಂಗವರು ಆ ಧರ್ಮಪೀಠವನ್ನು ಅಲಂಕರಿಸಿದ್ದಾರೆಂಬ ವಿಚಾರವೇನೋ ತಿಳಿದುಬಂದಿದೆ. ಆದರೆ ಖಚಿತವಾದ ದಾಖಲೆಗಳು ದೊರೆಯದೆ ಕಾಲಾನುಕ್ರಮವಾಗಿ ಬಂದ ಯತಿವರ್ಯರ ಹೆಸರುಗಳು ಮತ್ತು ವಿವರಗಳನ್ನು ಪೂರ್ಣವಾಗಿ ತಿಳಿಯುವುದು ಸದ್ಯಕ್ಕೆ ಸಾಧ್ಯವಿಲ್ಲವಾಗಿದೆ. ಇಷ್ಟಾದ ಮೇಲೆ 1780 ರಿಂದ ಮುಂದಕ್ಕೆ ಪೀಠವೇರಿದವರ ವಿಚಾರಗಳು ತಕ್ಕಷ್ಟು ತಿಳಿದುಬಂದಿವೆ.

ಉದ್ದಂಡಯೋಗಾನಂದಸರಸ್ವತಿಗಳ ತರುವಾಯ ಯಡತೊರೆಯ ಪೀಠವನ್ನು ಶ್ರೀಮಾಧವಾನಂದಸರಸ್ವತಿಗಳೆಂಬ ಯತಿವರ್ಯರು ಸುಮಾರು 1800ನೆಯ

ಇಸವಿಯಲ್ಲಿ ಅಲಂಕರಿಸಿದರು. ಮಾಧವಾನಂದರಿಗಾಗಲಿ, ಅವರ ತರುವಾಯ ಪೀಠವೇರಿದ ಯತಿವರ್ಯರಿಗಾಗಲಿ, ಯಡತೊರೆಪೀಠದ ಜೊತೆಗೆ ಹೊಳೆನರಸೀಪುರದ ರಾಮಬ್ರಹ್ಮಾನಂದಮಠವನ್ನು ಕೂಡ ಪರಿಪಾಲಿಸುವ ಹೆಚ್ಚಿನ ಕರ್ತವ್ಯವು ಕೂಡಿಕೊಂಡಿತು. ಮಾಧವಾನಂದಸ್ವಾಮಿಗಳು ಹೊಳೆನರಸೀಪುರದಲ್ಲಿ ರಾಮಬ್ರಹ್ಮಾನಂದಸ್ವಾಮಿಗಳ ಅಧಿಷ್ಠಾನದಲ್ಲಿ ಅವರ ಶಿಲಾವಿಗ್ರಹವೊಂದನ್ನು ಪ್ರತಿಷ್ಠಾಪನೆ ಮಾಡಿಸಿದರು. ರಾಮನವಮಿ ಮತ್ತು ಶಿವರಾತ್ರಿಪರ್ವಗಳ ಆಚರಣೆಗೆ ರಾಮಬ್ರಹ್ಮಾನಂದಮಠದಲ್ಲಿ ಹೆಚ್ಚಿನ ವೈಭವವು ಪ್ರಾಪ್ತವಾಗುವಂತೆ ಮಾಡಿದರು. ಅದೇ ಕಾರಣವಾಗಿ ಮಾಧವಾನಂದರ ಜೀವಿತಾವಧಿಯಲ್ಲಿಯೇ, ರಾಮನವಮಿಯಂದು ಚತುರ್ಭುಜಪಟ್ಟಾಭಿರಾಮದೇವರಿಗೆ ರಥೋತ್ಸವ ಮತ್ತು ಶಿವರಾತ್ರಿಯಂದು ನೀಲಕಂಠೇಶ್ವರಸ್ವಾಮಿಗೆ ರಥೋತ್ಸವ ಎಂಬೆರಡು ಮಹೋತ್ಸವಗಳು ನೂತನವಾಗಿ ಕೂಡಿಕೊಂಡುವು.

ಮಾಧವಾನಂದಸ್ವಾಮಿಗಳ ಪ್ರಭಾವದಿಂದ ಯಡತೊರೆಗೆ ಸಮೀಪದ ಮಂಚನಹಳ್ಳಿ ಎಂಬ ಗ್ರಾಮದಲ್ಲಿ ಯೋಗಾನಂದೇಶ್ವರಸರಸ್ವತೀಮಠದ ಹೆಸರಿನಲ್ಲಿ ಶಾಖೆಯೊಂದು ನಿರ್ಮಾಣವಾಗಿ, ಭಕ್ತರು ಅದರಿಂದ ಲಾಭಾನ್ವಿತರಾದರು. ಆದರೆ ಮಾಧವಾನಂದರು ಮುಕ್ತರಾದ ಬಳಿಕ, ಮಂಚನಹಳ್ಳಿಯ ಭಕ್ತರ ನಿರಾಸಕ್ತಿಯಿಂದಾಗಿ ಆ ಶಾಖೆಯು ತೆರೆಮರೆಗೆ ಸರಿದುಹೋಯಿತು. 1865ರಲ್ಲಿ ಮಾಧವಾನಂದಸರಸ್ವತಿಗಳು ಮುಕ್ತರಾದರು. ಅವರ ಅಧಿಷ್ಠಾನವು ಹಳೆಯಡತೊರೆಯ ಕಾವೇರಿಯ ತೀರದ ಮೂಲಮಠದಲ್ಲಿದೆ.

## ರಾಮಯೋಗಬ್ರಹ್ಮಾನಂದಸ್ವಾಮಿಗಳು

ಮಾಧವಾನಂದಸರಸ್ವತಿಗಳ ತರುವಾಯ ವೆಂಕಟೇಶಬ್ರಹ್ಮಾನಂದಸರಸ್ವತಿಗಳೆಂಬ ಯತಿವರ್ಯರು ಯಡತೊರೆಯ ಪೀಠವನ್ನೇರಿದರು. ಅವರ ಆಡಳಿತಾವಧಿಯ ವಿವರಗಳು ಲಭ್ಯವಾಗಿಲ್ಲ. ಅವರ ಕಾಲದಲ್ಲಿ ಯಡತೊರೆಯ ಮಠಕ್ಕಾಗಲಿ, ಹೊಳೆನರಸೀಪುರದ ಮಠಕ್ಕಾಗಲಿ ಸಮರ್ಥರಾದ ಆಡಳಿತಾಧಿಕಾರಿಗಳು ದೊರೆಯದೆ ನಿರ್ವಹಣೆಯು ದುಸ್ತರವಾಯಿತು. ಯಡತೊರೆಯ ಮಠವು ಹೇಗೋ ನಡೆಯುತ್ತಿತ್ತು. ಆದರೆ ಹೊಳೆನರಸೀಪುರದ ಮಠಕ್ಕೆ ಭೂಮಿರೂಪದಲ್ಲಿ ಆಸ್ತಿಪಾಸ್ತಿಗಳು ವಿಪುಲವಾಗಿದ್ದುದರಿಂದ, ಅಲ್ಲಿ ಅರಾಜಕತೆಯುಂಟಾಗಬಾರದೆಂದು ಅದರ ವ್ಯವಹಾರವನ್ನು ಸರ್ಕಾರಕ್ಕೆ ವಹಿಸಿಕೊಡಬೇಕಾಗಿ ಬಂದಿತು. ವೆಂಕಟೇಶಬ್ರಹ್ಮಾನಂದರು ಹೊಳೆನರಸೀಪುರದಲ್ಲಿಯೇ ಮುಕ್ತರಾದುದರಿಂದ ಅವರ ಅಧಿಷ್ಠಾನವು ಅಲ್ಲಿಯೇ ಹೇಮಾವತಿ ನದಿಯ ತಟದಲ್ಲಿದೆ. ವೆಂಕಟೇಶಬ್ರಹ್ಮಾನಂದರ ತರುವಾಯ ಯಡತೊರೆಯ ಪೀಠಕ್ಕೆ ರಾಮಯೋಗಬ್ರಹ್ಮಾನಂದಸ್ವಾಮಿಗಳು ಅಧಿಪತಿಗಳಾದರು. ಅವರ ವಿಚಾರದಲ್ಲಿ ಕೆಲವು ಸ್ವಾರಸ್ಯಕರ ಸಂಗತಿಗಳು ಲಭ್ಯವಾಗಿರುವುದು ಸಂತೋಷಜನಕ ಸಂಗತಿಯಾಗಿದೆ. ರಾಮಯೋಗಬ್ರಹ್ಮಾನಂದರು ಇಂದಿನ ಚಿಕ್ಕಬಳ್ಳಾಪುರಜಿಲ್ಲೆಯ ತಾಲ್ಲೂಕುಕೇಂದ್ರಗಳಲ್ಲಿ ಒಂದಾದ ಶಿಡ್ಲಘಟ್ಟವೆಂಬ ಪಟ್ಟಣದಲ್ಲಿ ಸುಬ್ಬಮ್ಮ ಮತ್ತು ಕಾರ್ಕರ್ಲವೆಂಕಟೇಶಶಾಸ್ತ್ರಿಗಳೆಂಬ ಗೃಹಸ್ಥರ ಹಿರಿಯ ಮಗನಾಗಿ 1870 ರಲ್ಲಿ ಜನಿಸಿದರು. ವೆಂಕಟರಾಮಾಶಾಸ್ತ್ರೀ ಎಂಬುದು

ಅವರ ಜನ್ಮನಾಮವಾಗಿತ್ತು. ಬಾಲ್ಯದ ವಿದ್ಯಾಭ್ಯಾಸವೆಲ್ಲ ಅವರಿಗೆ ತಂದೆಯವರಿಂದಲೇ ಆಯಿತು. ತಂದೆಯವರು ನಿರೀಕ್ಷಿಸಿದ ಮಟ್ಟದಲ್ಲಿ ವಿದ್ಯಾಭ್ಯಾಸಕ್ಕೆ ಗಮನಕೊಡುತ್ತಿರ ಲಿಲ್ಲ. ಅದರಿಂದ ಕೋಪಗೊಂಡ ತಂದೆಯವರು "ಹೀಗಾದರೆ ಹೇಗೆ, ನೀನು ಒಳ್ಳೆಯ ವಿದ್ಯಾವಂತನಾಗಬೇಡವೇ" ಎಂದು ಹೇಳಿ, ಒಂದುದಿನ ಕೋಲಿನಿಂದ ಕಠಿಣವಾಗಿ ದಂಡಿಸಿದರು. ಅದೇ ಕಾರಣವಾಗಿ ವೆಂಕಟರಾಮರು ತಂದೆಯವರ ಮೇಲೆ ಮುನಿಸಿ ಕೊಂಡು, ಅದೇ ದಿನದಂದು ಗೃಹತ್ಯಾಗ ಮಾಡಿಬಿಟ್ಟರು. ಆಗ ಅವರು ಕೇವಲ ಹನ್ನೊಂದು ವರ್ಷದ ಬಾಲಕರಾಗಿದ್ದರು.

ಶಿಡ್ಲಘಟ್ಟದಿಂದ ಹೊರಟ ವೆಂಕಟರಾಮರು ಚಿಕ್ಕಬಳ್ಳಾಪುರಜಿಲ್ಲೆಯ ಚಿಂತಾಮಣಿ ತಾಲ್ಲೂಕಿಗೆ ಸೇರುವ ಮುಂಗಾನಹಳ್ಳಿ ಎಂಬ ಗ್ರಾಮದಲ್ಲಿದ್ದ ತಮ್ಮ ಅಕ್ಕನವರ ಮನೆಯಲ್ಲಿ ಆಶ್ರಯಪಡೆದುಕೊಂಡರು. ಭಾವನವರಾದ ಲಕ್ಷ್ಮೀನರಸಿಂಹಶಾಸ್ತ್ರಿಗಳು ಒಳ್ಳೆಯ ವಿದ್ಯಾ ವಂತರಾಗಿದ್ದು, ವೆಂಕಟರಾಮರು ಅಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಹದಿನಾರುವರ್ಷ ತುಂಬಿದಾಗ ಅಕ್ಕ ಭಾವನವರ ಅಪ್ಪಣೆಪಡೆದು, ಚಿಂತಾಮಣಿಯಲ್ಲಿಯೇ ಸ್ವಲ್ಪಕಾಲ ಅಂಚೆಇಲಾಖೆಯಲ್ಲಿ ಸೇವೆಸಲ್ಲಿಸಿದರು. ಆದರೆ ಆ ಕೆಲಸದಲ್ಲಿ ಅವರಿಗೆ ಮನಸ್ಸು ಒಡಂಬಡದೆ ವೈರಾಗ್ಯದತ್ತ ಒಲಿಯಿತು. "ನಾನು ಸನ್ಯಾಸಿಯಾಗಬೇಕು" ಎಂಬ ಆಕಾಂಕ್ಷೆ ಬಲವಾಯಿತು. ಆ ವಿಚಾರವು ಭಾವನವರಾದ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೂ ತಿಳಿಯಿತು. ಅಷ್ಟುಮಾತ್ರವಲ್ಲದೆ ಯಡತೊರೆಮಠದವರು ಶಿಷ್ಯಸ್ವೀಕಾರಕ್ಕಾಗಿ ಯೋಗ್ಯರಾದ ಬ್ರಹ್ಮಚಾರಿಗಳನ್ನು ಅರಸುತ್ತಿದ್ದಾರೆ ಎಂಬ ವಿಚಾರವೂ ತಿಳಿಯಿತು. ಅದನ್ನರಿತ ಶಾಸ್ತ್ರಿಗಳು, ವೆಂಕಟರಾಮರನ್ನು ಚಿಂತಾಮಣಿಯಿಂದ ಯಡತೊರೆಮಠಕ್ಕೆ ಕರೆತಂದರು. ಪೀಠಾಧಿಪತಿ ಗಳಾಗಿದ್ದ ವೆಂಕಟೇಶಬ್ರಹ್ಮಾನಂದರು, ವೆಂಕಟರಾಮರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕಾರ ಮಾಡಿದರು. ಅಲ್ಲಿಯೇ ಸನ್ಯಾಸದೀಕ್ಷೆಯು ನೆರವೇರಿ, ರಾಮಯೋಗಬ್ರಹ್ಮಾನಂದರೆಂಬ ನಾಮವಾಯಿತು. ಶ್ರೀರಾಮನ ಇಚ್ಛೆಯಂತೆ ಸತ್ಕಾರ್ಯಗಳ ಕೊಂಡಿಗಳು ಒಂದಕ್ಕೊಂದು ಹಿತವಾಗಿ ಕೂಡಿಕೊಂಡುವು.

ತರುವಾಯದಲ್ಲಿ ಲಕ್ಷ್ಮೀನರಸಿಂಹಶಾಸ್ತ್ರಿಗಳು, ರಾಮಯೋಗಬ್ರಹ್ಮಾನಂದರನ್ನು ಮೈಸೂರಿಗೆ ಕರೆದೊಯ್ದು, ಶ್ರೇಷ್ಠ ವಿದ್ವನ್ಮಣಿಗಳ ಮಾರ್ಗದರ್ಶನದಲ್ಲಿ ವೇದಾಂತವೇ ಮೊದಲಾದ ಶಾಸ್ತ್ರಗಳ ಅಧ್ಯಯನಕ್ಕೆ ಸೂಕ್ತವಾದ ಏರ್ಪಾಡುಮಾಡಿದರು. ಅದನ್ನೆಲ್ಲ ಯಶಸ್ವಿಯಾಗಿ ಮುಗಿಸಿಕೊಂಡು ಬಂದು, ರಾಮಯೋಗಬ್ರಹ್ಮಾನಂದರು ಯಡತೊರೆಯ ಪೀಠವನ್ನು 1924ರಲ್ಲಿ ಅಲಂಕರಿಸಿದರು. ಲಕ್ಷ್ಮೀನರಸಿಂಹಶಾಸ್ತ್ರಿಗಳೇ ಚಿಂತಾಮಣಿಯನ್ನು ತೊರೆದು, ಯಡತೊರೆಮಠದ ಆಡಳಿತಾಧಿಕಾರಿಗಳಾಗಿದ್ದುಕೊಂಡು, ಅದರ ಏಳಿಗೆ ಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡರು.

## ಯಡತೊರೆಮಠದ ಸ್ಥಳಾಂತರ

ಮೈಸೂರುನಗರವು ಈ ಹಿಂದೆ ಯದುವಂಶದ ಅರಸರ ಆಳ್ವಿಕೆಯ ರಾಜಧಾನಿಯಾಗಿತ್ತು. ರಾಮಯೋಗಬ್ರಹ್ಮಾನಂದರ ಕಾಲದಲ್ಲಿ ನಾಲ್ವಡಿಕೃಷ್ಣರಾಜಒಡೆಯರು ಮೈಸೂರುಸಂ

ಸ್ಥಾನದ ದೊರೆಗಳಾಗಿ (1895-1940) ರಾಜ್ಯಭಾರ ಮಾಡುತ್ತಿದ್ದರು. ಅವರ ವಿಶ್ವಾಸಕ್ಕೆ ಪಾತ್ರ ರಾಗಿದ್ದ ವಿಶ್ವವಿಖ್ಯಾತ ಇಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯನವರು, ಲೋಕೋಪಕಾರದ ದೃಷ್ಟಿಯಿಂದ ಕಾವೇರೀನದಿಗೆ ದೊಡ್ಡದೊಂದು ಅಣೆಕಟ್ಟು ಕಟ್ಟಿಸುವ ಸಲಹೆನೀಡಿದರು. ಅದರಂತೆ ಯಡತೊರೆಯಿಂದ ಮುಂದಕ್ಕೆ ಸುಮಾರು 15 ಕಿಲೋಮೀಟರುಗಳ ದೂರದ ಕನ್ನಂಬಾಡಿ ಎಂಬ ಗ್ರಾಮದ ಬಳಿ 124 ಅಡಿಗಳಷ್ಟು ಎತ್ತರವಾದ ಕಟ್ಟೆ ಯೊಂದು, 1915ರಲ್ಲಿ ನಿರ್ಮಾಣವಾಯಿತು. ಆ ಕಟ್ಟೆಯು ದೊರೆಗಳ ಹೆಸರಿನಲ್ಲಿಯೇ ಕೃಷ್ಣರಾಜಸಾಗರ (ಕೆ.ಆರ್.ಎಸ್) ಎಂಬ ಹೆಸರಿನಿಂದ ಲೋಕವಿಖ್ಯಾತವಾಯಿತು, ಅದೊಂದು ಪ್ರೇಕ್ಷಣೀಯ ಸ್ಥಳವೂ ಆಯಿತು.

ಕೃಷ್ಣರಾಜಸಾಗರವು ಮಳೆಗಾಲದಲ್ಲಿ ಪೂರ್ಣವಾಗಿ ತುಂಬಿದಾಗ, ಅದರ ಹಿನ್ನೀರು ಕಾವೇರಿಯಲ್ಲಿ ಯಡತೊರೆಯವರೆಗೂ ಹಿಮ್ಮರಳುತ್ತಿತ್ತು. 1924ನೆಯ ವರ್ಷದ ಒಂದಾನೊಂದು ಮಳೆಗಾಲದಲ್ಲಿ ಕುಂಭದ್ರೋಣ ಮಳೆಯು ಸುರಿದು, ಕೃಷ್ಣರಾಜ ಸಾಗರದ ಕಾವೇರಿಯ ಹಿನ್ನೀರು ಉಕ್ಕಿಬಂದು, ಅದು ಯಡತೊರೆಪಟ್ಟಣದೊಳಕ್ಕೂ ನುಗ್ಗಿ, ಸಾಕಷ್ಟು ಹಾನಿಯುಂಟಾಯಿತು. ಕೆಲವು ದಿನಗಳ ತರುವಾಯ ಪ್ರವಾಹವು ಇಳಿಯಿತು. "ಯಡತೊರೆಯು ಕಾವೇರಿನದಿಯ ತೀರದಲ್ಲಿರುವುದು ಕ್ಷೇಮಕರವಲ್ಲ" ಎಂದು ಆಲೋಚಿಸಿದ ಮೈಸೂರುಮಹಾರಾಜರು, ತಜ್ಞರ ಸಲಹೆಯಂತೆ, ಯಡತೊರೆ ಯನ್ನು ಸುಮಾರು ಮೂರು ಕಿಲೋಮೀಟರುಗಳು ದೂರದ ಕಗ್ಗಲಿಬೋರೆ ಎಂಬ ಹೆಸರಿನ ಎತ್ತರವಾದ ಜಾಗವೊಂದಕ್ಕೆ ಸ್ಥಳಾಂತರಿಸುವ ಏರ್ಪಾಡುಮಾಡಿದರು.

ಹೊಸದಾಗಿ ಕಟ್ಟಿದ ಪಟ್ಟಣವು ಮಾದರಿಪಟ್ಟಣವಾಗಿ ಬೆಳೆಯಬೇಕೆಂಬ ಆಸೆಯಿಂದ ಕೃಷ್ಣರಾಜಒಡೆಯರು, ವಿಶ್ವೇಶ್ವರಯ್ಯನವರ ಸಲಹೆಯಂತೆ, ಜರ್ಮನಿಯಿಂದ ಪಟ್ಟಣ ನಿರ್ಮಾಣ ತಜ್ಞನಾದ ಕ್ರೆಂಬಿಗಲ್ ಎಂಬಾತನನ್ನು ಬರಮಾಡಿಕೊಂಡರು. ಅವನು ರಚಿಸಿದ ನಕ್ಷೆಗನುಗುಣವಾಗಿ ಹೊಸಪಟ್ಟಣದ ನಿರ್ಮಾಣವಾಯಿತು. ಮನೆಕಟ್ಟಿಕೊಳ್ಳಲು ನಿವೇಶನ, ಒಂದಿಷ್ಟು ಪರಿಹಾರಧನ ಮುಂತಾದುವನ್ನು ದೊರೆಗಳು ಪ್ರಜೆಗಳಿಗೆ ದೊರಕಿಸಿಕೊಟ್ಟರು. 1924ರಿಂದಲೇ ಪ್ರಾರಂಭಗೊಂಡ ನೂತನನಗರನಿರ್ಮಾಣಕಾರ್ಯವು, 1934ರವರೆಗೆ ಹಂತಹಂತವಾಗಿ ನಡೆಯಿತು. 16-6-1934ರಂದು ಕೃಷ್ಣರಾಜಒಡೆಯರೇ ಬಂದು, ಆ ಹೊಸಪಟ್ಟಣವನ್ನು ಉದ್ಘಾಟಿಸಿದರು. ದೊರೆಗಳ ಹೆಸರನ್ನೇ ಇಟ್ಟರೆ ಅದು ಬೇಗ ಅಭಿವೃದ್ಧಿ ಹೊಂದುತ್ತದೆ ಎಂಬ ಸದಾಶಯದಿಂದ, ಅದಕ್ಕೆ ಕೃಷ್ಣರಾಜನಗರ ಎಂದು ಪುರಪ್ರಮುಖರು ನಾಮಕರಣ ಮಾಡಿದರು. ಅದು ಜನರ ಬಾಯಲ್ಲಿ ಸಂಗ್ರಹವಾಗಿ ಕೆ.ಆರ್.ನಗರ ಎಂದು ಖ್ಯಾತವಾಯಿತು.

ಎಡತೊರೆಯ ಅರ್ಕೇಶ್ವರಸ್ವಾಮಿಯ ದೇವಾಲಯಕ್ಕಾಗಲಿ, ಯೋಗಾನಂದೇಶ್ವರಸರ ಸ್ವತೀಮಠಕ್ಕಾಗಲಿ, ಅವು ಶಿಲಾಮಯರಚನೆಗಳಾಗಿದ್ದುದರಿಂದ ಹೆಚ್ಚಿನ ಹಾನಿಯೇನೂ ಕಾವೇರಿಯ ಪ್ರವಾಹದ ದೆಸೆಯಿಂದ ಉಂಟಾಗಲಿಲ್ಲ. ಆದರೆ ಊರನ್ನೇ ವರ್ಗಾಯಿಸಿದ ಮೇಲೆ, ಮಠದ ಕೇಂದ್ರವನ್ನು ವರ್ಗಾಯಿಸುವುದು ಕೂಡ ಅನಿವಾರ್ಯವಾಯಿತು.

ಎಲ್ಲರಿಗೂ ದೊರೆತಂತೆಯೇ ಯೋಗಾನಂದೇಶ್ವರಸರಸ್ವತೀಮಠಕ್ಕೂ ಕೆ.ಆರ್.ನಗರದಲ್ಲಿ ನಿವೇಶನವು ಲಭಿಸಿತು. ರಾಮಯೋಗಬ್ರಹ್ಮಾನಂದರು ಚಿಕ್ಕದಾಗಿ ಒಂದು ಮಠವನ್ನು 1933ರಲ್ಲಿ ಕಟ್ಟಿಸಿ ಅಲ್ಲಿಯೇ ನೆಲೆಸಿದರು. ಆ ವರ್ಷವೇ ಶಿಷ್ಯಪರಿಗ್ರಹಣವನ್ನೂ ಮಾಡಿ ಅವರಿಗೆ ಕೃಷ್ಣಯೋಗಬ್ರಹ್ಮಾನಂದಸರಸ್ವತಿ ಎಂದು ನಾಮಕರಣ ಮಾಡಿದರು. 1936ರಲ್ಲಿ ರಾಮಯೋಗಬ್ರಹ್ಮಾನಂದರು ಬ್ರಹ್ಮೀಭೂತರಾದರು. ಅವರ ಅಧಿಷ್ಠಾನವು ಕೆ.ಆರ್.ನಗರದ ಮಠದಲ್ಲಿಯೇ ಇದೆ. ಈ ಮೊದಲೇ ಶಿಷ್ಯರಾಗಿ ಸ್ವೀಕೃತರಾಗಿದ್ದ ಕೃಷ್ಣಯೋಗಬ್ರಹ್ಮಾನಂದ ಸರಸ್ವತಿಗಳು ಪೀಠಾಧಿಪತಿಗಳಾಗಿ 1950ರವರೆಗೆ ಆ ಭಕ್ತಿಸಾಮ್ರಾಜ್ಯವನ್ನು ಮುನ್ನಡೆಸಿದರು.

### ವಾಸುದೇವಯೋಗಾನಂದಸರಸ್ವತಿಸ್ವಾಮಿಗಳು

1948ರ ಸರಿಸುಮಾರಿನಲ್ಲಿ ಕೃಷ್ಣಯೋಗಾನಂದಸರಸ್ವತಿಗಳು ಅನಾರೋಗ್ಯಕ್ಕೆ ತುತ್ತಾಗಿ ಬಿಟ್ಟರು. ಯೋಗ್ಯರಾದ ಯಾರನ್ನಾದರೂ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಬೇಕು ಎಂದು ಕಾತರಿಸುತ್ತಲೇ ಇದ್ದರು. ಅಂತಹ ಇಕ್ಕಟ್ಟಿನ ಸನ್ನಿವೇಶದಲ್ಲಿ ವಾಸುದೇವ ಯೋಗಾನಂದಸರಸ್ವತಿಗಳೆಂಬ ಸನ್ಯಾಸಿಗಳು ಭಾಗ್ಯವಶದಿಂದ ದೊರಕಿದರು. ಅವರು ಈ ಮೊದಲೇ ಸನ್ಯಾಸವನ್ನು ಸ್ವೀಕರಿಸಿ, ಬಿಡಿಸನ್ಯಾಸಿಗಳಾಗಿದ್ದುಕೊಂಡು, ಮೈಸೂರಿನಲ್ಲಿಯೂ ನಂಜನಗೂಡಿನಲ್ಲಿಯೂ ಅಧ್ಯಯನಮಾಡುತ್ತ ಅನುಷ್ಠಾನಗಳಲ್ಲಿ ನಿರತರಾಗಿದ್ದರು. ಕೆಲವು ಗೃಹಸ್ಥರು ಅವರನ್ನು ಭೇಟಿಮಾಡಿ ಕೆ.ಆರ್.ನಗರದ ಮಠಕ್ಕೆ ಸ್ವಾಮಿಗಳಾಗಬೇಕೆಂದು ಪ್ರಾರ್ಥಿಸಿದರು. ಅವರು ಒಪ್ಪಿಗೆ ನೀಡಿ ಮಠಾಧೀಶರಾಗಿ 1950ರಲ್ಲಿ ಪೀಠಾಧಿಪತಿಗಳಾದರು.

ತಮ್ಮ ದಿನನಿತ್ಯದ ಅನುಷ್ಠಾನಗಳ ಜೊತೆಗೆ ವಾಸುದೇವಯೋಗಾನಂದರು, ಮಠದ ಅಭಿವೃದ್ಧಿಯ ಕಡೆಗೂ ಗಮನಹರಿಸಿದರು. ಈ ಹಿಂದೆ ರಾಮಯೋಗಬ್ರಹ್ಮಾನಂದರು ಚಿಕ್ಕದಾಗಿ ಕಟ್ಟಿಸಿದ್ದ ಮಠವನ್ನು ವಿಸ್ತರಿಸಿ ಕಟ್ಟಿಸಿದರು. 1950ರಲ್ಲಿ ಶಂಕರಾಚಾರ್ಯರ ಮುದ್ದಾದ ಅಮೃತಶಿಲಾಮೂರ್ತಿಯನ್ನು ಕಡೆಯಿಸಿ ಮಠದಲ್ಲಿ ಪ್ರತಿಷ್ಠಾಪಿಸಿದರು. ಮಠದ ಆವರಣದಲ್ಲಿಯೇ ಪ್ರತ್ಯೇಕವಾಗಿ ನವಗ್ರಹಗುಡಿಯೊಂದನ್ನು ನಿರ್ಮಿಸಿದರು. ಆ ಕಾಲದಲ್ಲಿ ಮಠದ ಕೆಲವು ಆಸ್ತಿಪಾಸ್ತಿಗಳು ಪರಭಾರೆಯಾಗಿ ಅವುಗಳನ್ನು ಹಿಂಪಡೆಯಲು ನ್ಯಾಯಾಲಯದಲ್ಲಿ ಕಟ್ಟಳೆಗಳು ನಡೆಯುತ್ತಿದ್ದುವು. ವಾಸುದೇವಯೋಗಾನಂದರು ಅದರತ್ತಲೂ ಗಮನಹರಿಸಿದರು. ಎಂ.ವಿ. ನಾರಾಯಣರಾಯರೆಂಬ ಸಮರ್ಥರಾದ ವಕೀಲರೊಬ್ಬರಿದ್ದು, ಅವರು ತೀವ್ರವಾಗಿ ಕಾರ್ಯಪ್ರವೃತ್ತರಾಗುವಂತೆ ಸ್ವಾಮಿಗಳು ಅವರನ್ನು ಆಶೀರ್ವದಿಸಿ ಪ್ರೋತ್ಸಾಹಿಸಿದರು. ನಾರಾಯಣರಾಯರ ವಾದವೈಖರಿಯಿಂದಾಗಿ ಅನ್ಯಾಕ್ರಾಂತವಾಗಿದ್ದ ಮಠದ ಕೆಲವು ಆಸ್ತಿಗಳು ಮರಳಿ ಲಭಿಸಿದುವು.

### ಶಂಕರಾನಂದಸರಸ್ವತಿಸ್ವಾಮಿಗಳು

ವಾಸುದೇವಯೋಗಾನಂದಸರಸ್ವತಿಸ್ವಾಮಿಗಳು ತಮ್ಮ ಜೀವಿತಕಾಲದಲ್ಲಿಯೇ ಮೈಸೂರಿನ ಬಂಗಾರಶಾಸ್ತ್ರೀ ಎಂಬುವವರ ದ್ವಿತೀಯಪುತ್ರರಾದ ಭಾರತೀತೀರ್ಥ ಎಂಬ ವಟುವನ್ನು ಶಿಷ್ಯರಾಗಿ ಸ್ವೀಕಾರಮಾಡಿದರು. ಅದು 1963ರಲ್ಲಿ ನೆರವೇರಿತು. ಭಾರತೀತೀರ್ಥರಿಗೆ

ಶಂಕರಾನಂದಸರಸ್ವತಿಗಳೆಂಬ ಆಶ್ರಮನಾಮವಾಯಿತು. ಶಂಕರಾನಂದರು ತಮ್ಮ ಗುರುಗಳ ಮಾರ್ಗದರ್ಶನದಲ್ಲಿ ಆಶ್ರಮೋಚಿತವಾದ ಅನುಷ್ಠಾನಗಳನ್ನೂ ವೇದಾಂತವೇ ಮೊದಲಾದ ಶಾಸ್ತ್ರಗಳನ್ನೂ ಚೆನ್ನಾಗಿ ರೂಢಿಸಿಕೊಂಡು ಯಶಸ್ವಿಗಳಾಗಿ ಮೇಲೆಬಂದರು. ಈ ಮೊದಲು ಶಂಕರಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದ ವಾಸುದೇವಯೋಗಾನಂದ ಗುರುಗಳು, 1963ರಲ್ಲಿ ಶಿಷ್ಯರಾದ ಶಂಕರಾನಂದರೊಡಗೂಡಿ ನಯನಮನೋಹರವಾದ ಅಮೃತಶಿಲೆಯ ಶಾರದಾಂಬೆಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಅದರ ಕಾರಣದಿಂದಾಗಿ ಮಠವು ಹೆಚ್ಚು ಜನಾದರಣೀಯವಾಯಿತು.

## ಅರಮನೆ ಗುರುಮನೆಗಳ ನಡುವಣ ಸಂಬಂಧ

ಶಂಕರಾನಂದಸರಸ್ವತಿಗಳ ಪೂರ್ವಾಶ್ರಮದ ತಂದೆಯವರಾದ ಬಂಗಾರಶಾಸ್ತ್ರಿಗಳು, ಮೈಸೂರುಮಹಾರಾಜರ ಆಸ್ಥಾನವಿದ್ವಾಂಸರಾಗಿ ಸೇವೆಸಲ್ಲಿಸಿದ್ದರು. ಅದರ ದೆಸೆಯಿಂದಾಗಿ ಮೈಸೂರು ಅರಮನೆಗೂ ಕೆ.ಆರ್.ನಗರದ ಗುರುಮನೆಗೂ ನಡುವೆ ಭಕ್ತಿಬಾಂಧವ್ಯವು ಏರ್ಪಟ್ಟಿತು. ಆಗ ಮೈಸೂರುಸಂಸ್ಥಾನವನ್ನಾಳುತ್ತಿದ್ದ ಜಯಚಾಮರಾಜೇಂದ್ರಒಡೆಯರು, ಶಂಕರಾನಂದಸ್ವಾಮಿಗಳ ವಿಷಯದಲ್ಲಿ ಹೆಚ್ಚಿನ ಗೌರವಾದರಗಳನ್ನಿರಿಸಿಕೊಂಡಿದ್ದರು. ಲೋಕಹಿತಕ್ಕಾಗಿ ತಾವು ಕೈಗೊಳ್ಳುತ್ತಿದ್ದ ಧಾರ್ಮಿಕ ಅಥವಾ ಸಾಮಾಜಿಕ ಕಾರ್ಯಗಳು ಯಾವುದೇ ಇರಲಿ, ಅವುಗಳನ್ನು ಕಾರ್ಯರೂಪಕ್ಕೆ ತರುವ ಮುನ್ನ ಮಹಾರಾಜರು ಶಂಕರಾನಂದಸರಸ್ವತಿಗಳ ಮಾರ್ಗದರ್ಶನವನ್ನು ತಪ್ಪದೆ ಪಡೆದುಕೊಳ್ಳುತ್ತಿದ್ದರು. ಸುಗ್ಗಿಹಳ್ಳಿ ಎಂಬ ಗ್ರಾಮವೊಂದರಲ್ಲಿ ಕುಷ್ಠರೋಗದ ಚಿಕಿತ್ಸೆಗೆ ಆಸ್ಪತ್ರೆಯನ್ನು ತೆರೆಯಲು ಹೊರಟಾಗ ಅದರ ಶಂಕುಸ್ಥಾಪನೆಯು ಶಂಕರಾನಂದರ ಅಮೃತಹಸ್ತದಿಂದಲೇ ನೆರವೇರುವಂತೆ ಮಾಡಿದರು.

## ಗರುಡಚಯನ ಮಹಾಯಾಗ

ಶಂಕರಾನಂದಸರಸ್ವತಿಗಳು ಸಾಹಿತ್ಯ ಮತ್ತು ಸಂಗೀತದಲ್ಲಿ ಹೆಚ್ಚಿನ ಒಲವುಳ್ಳವರಾಗಿದ್ದರು. ಯಂತ್ರಮಂತ್ರೌಷಧಿಗಳನ್ನು ರೂಢಿಸಿಕೊಂಡಿದ್ದರು. ಕೆಲವು ಸಿದ್ಧಿಗಳೂ ಅವರ ಕೈವಶವಾಗಿದ್ದುವು, ಬೇಡಿಬಂದ ಭಕ್ತರ ದುಃಖದುಮ್ಮಾನಗಳನ್ನು ಪರಿಹರಿಸಿಕೊಡುತ್ತಿದ್ದರು. ಅದೇ ಕಾರಣದಿಂದ ಮಠಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಹೆಚ್ಚಾಯಿತು. ಹಾಗೆ ಬರುವ ಭಕ್ತಾದಿಗಳಿಗೆ ಸ್ವಾಮಿಗಳು ಪ್ರಸಾದಭೋಜನದ ವ್ಯವಸ್ಥೆಯನ್ನೂ ಮಾಡಿಸಿದರು. ಮೈಸೂರಿನ ದೊರೆಸ್ವಾಮಿಅಯ್ಯರ್ ಎಂಬ ಗಣ್ಯರಾದ ಅಗ್ನಿಹೋತ್ರಿಗಳ ನೇತೃತ್ವದಲ್ಲಿ ಮೂಲಮಠವಿರುವ ಎಡತೊರೆಕ್ಷೇತ್ರದಲ್ಲಿ 'ಗರುಡಚಯನ' ಎಂಬ ಹೆಸರಿನ ಮಹಾಯಾಗವೊಂದನ್ನು ಮಾಡಿಸಿದರು.

ಶಂಕರಾನಂದಸ್ವಾಮಿಗಳ ಕಾಲದಲ್ಲಿ ಮತಾಂತರದ ಹಾವಳಿ ಅತಿಯಾಗಿತ್ತು. ಬಡವರಾದ ಹಿಂದೂಗಳನ್ನು ದುಡ್ಡಿನಾಸೆ ತೋರಿಸಿ, ಕ್ರೈಸ್ತರು ಮತ್ತು ಮುಸಲ್ಮಾನರು ತಮ್ಮತಮ್ಮ ಧರ್ಮಗಳಿಗೆ ಸೇರಿಸಿಕೊಂಡು, ಹಿಂದೂಧರ್ಮವನ್ನು ದುರ್ಬಲಗೊಳಿಸುತ್ತಿದ್ದರು. ಅದನ್ನು ತಡೆಗಟ್ಟಬೇಕೆಂಬ ಪ್ರಯತ್ನದ ಹಿನ್ನೆಲೆಯಲ್ಲಿ ಶಂಕರಾನಂದಸ್ವಾಮಿಗಳು ವಿಶ್ವಹಿಂದೂಪರಿಷತ್ತನ್ನು ಬಲಪಡಿಸಿದರು.

ಭಕ್ತಜನಪ್ರಿಯರಾಗಿದ್ದ ಶಂಕರಾನಂದಗುರುಗಳು, ಆಗಾಗ ಭಕ್ತರ ಪ್ರಾರ್ಥನೆಯಂತೆ ದೇಶಪರ್ಯಟನವನ್ನು ಕೈಗೊಳ್ಳುತ್ತಿದ್ದರು. ಈಗ ಆಂಧ್ರಪ್ರದೇಶಕ್ಕೆ ಸೇರಿರುವ ಅದೋನಿಗೆ ಹೋದರೆ ಸ್ವಲ್ಪಕಾಲ ಅಲ್ಲಿಯೇ ಬಿಡಾರಮಾಡುತ್ತಿದ್ದರು. ಅದೋನಿಯು ಕರ್ನೂಲುಜಿಲ್ಲೆಗೆ ಸೇರಿರುವ ತಾಲ್ಲೂಕುಗಳಲ್ಲಿ ಒಂದಾಗಿದೆ. ಅದು ಅವರಿಗೆ ಹೆಚ್ಚು ಪ್ರಿಯವಾದ ಪಟ್ಟಣ ವಾಗಿತ್ತು. 1968ರಲ್ಲಿ ವಾಸುದೇವಯೋಗಾನಂದಗುರುಗಳು ಕೆ.ಆರ್.ನಗರದ ಮಠದಲ್ಲಿ ಬ್ರಹ್ಮೀಭೂತರಾದರು. ಆಗ ಶಂಕರಾನಂದರು ಭಕ್ತಜನರೊಡಗೂಡಿ, ಕಾವೇರೀತೀರದ ಯಡತೊರೆಯ ಮೂಲಮಠದಲ್ಲಿಯೇ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಿ, ಅಧಿಷ್ಠಾನವೊಂದನ್ನು ನಿರ್ಮಿಸಿದರು.

ಹೀಗೆಯೇ ಒಮ್ಮೆ ಶಂಕರಾನಂದಸರಸ್ವತಿಗಳು ಅದೋನಿಗೆ ಹೋಗಿದ್ದಾಗ ರಾಮನ ಇಚ್ಛೆಯಂತೆ 1974ರಲ್ಲಿ ಅಲ್ಲಿಯೇ ದೇಹತ್ಯಾಗ ಮಾಡಿದರು. ಅದೋನಿಯ ಭಕ್ತರು ಅಲ್ಲಿಯೇ ಸ್ವಾಮಿಗಳನ್ನು ಭೂಗತಗೊಳಿಸಿ ಒಂದು ಅಧಿಷ್ಠಾನವನ್ನು ನಿರ್ಮಿಸಿದರು. ಆ ಅಧಿಷ್ಠಾನವು ಅದೋನಿಯ ನೀಲಕಂಠೇಶ್ವರದೇವಾಲಯಕ್ಕೆ ಸಮೀಪದಲ್ಲಿದೆ. ಅವರ ಜೀವಿತಾವಧಿಯಲ್ಲಿ ಮಠಕ್ಕೆ ಉತ್ತರಾಧಿಕಾರಿಗಳಾರೂ ಲಭಿಸಲಿಲ್ಲ. ಪೀಠವು ರಿಕ್ತವಾಗಿಯೇ ಇದ್ದುಕೊಂಡಿತ್ತು.

## ಗಣಪತಿಭಾರತಿಸ್ವಾಮಿಗಳು

ವಾಸುದೇವಯೋಗಾನಂದಸರಸ್ವತಿಗಳ ಕಾಲದಲ್ಲಿ ಶಿವಾನಂದತೀರ್ಥರೆಂಬ ಬಿಡಿಸನ್ಯಾಸಿಯೊಬ್ಬರು ವಾಸುದೇವಾನಂದರ ಒಡನಾಡಿಗಳಾಗಿರುತ್ತ ತಮ್ಮ ಅನುಷ್ಠಾನಗಳ ಜೊತೆಗೆ, ಮಠದ ಸೇವೆಗೇ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. 1949ರಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದ್ದ ಅವರು, ವಾಸುದೇವಾನಂದರಿಗಿಂತ ಆರುವರ್ಷ ಮುನ್ನವೇ 1962ರಲ್ಲಿ ಬ್ರಹ್ಮೈಕ್ಯರಾದರು. "ಮಠದ ಸೇವೆಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡ ಸನ್ಯಾಸಿಗಳು ಇವರಲ್ಲವೇ" ಎಂಬ ಪ್ರೀತ್ಯಾದರಗಳಿಂದ ಅವರ ಅಧಿಷ್ಠಾನಕ್ಕೆ ವಾಸುದೇವಯೋಗಾನಂದರು ಕಾವೇರೀತೀರದ ಮೂಲಮಠದಲ್ಲಿಯೇ ಸ್ಥಳಾವಕಾಶ ಕಲ್ಪಿಸಿಕೊಟ್ಟರು. ಈಗಲೂ ಅವರ ಭಕ್ತಬಳಗದವರು ಅವರು ಮುಕ್ತರಾದ ಉತ್ಥಾನದ್ವಾದಶಿಯಂದು ಯಡತೊರೆಮಠಕ್ಕೆ ಬಂದು, ಅವರ ಆರಾಧನೆಯನ್ನು ನೆರವೇರಿಸುತ್ತಿದ್ದಾರೆ.

ಶಂಕರಾನಂದಸರಸ್ವತಿಗಳು ಕರ್ಮಕಾಂಡದಲ್ಲಿ ನಿಸ್ಸೀಮರಾದ ಮೈಸೂರಿನ ದೊರೆಸ್ವಾಮಿ ಅಯ್ಯರ್ ಅವರ ನಾಯಕತ್ವದಲ್ಲಿ ಗರುಡಚಯನವೆಂಬ ಮಹಾಯಾಗವನ್ನು ಮಾಡಿಸಿದರೆಂಬ ವಿಚಾರವನ್ನು ನಾವು ಈ ಹಿಂದೆಯೇ ನೋಡಿದೆವು. ಆ ದೊರೆಸ್ವಾಮಿ ಅಯ್ಯರ್ ಅವರು ಅದೇ ರೀತಿಯ 14 ವಿಶೇಷ ಯಜ್ಞಯಾಗಾದಿಗಳನ್ನು ಸಂಪನ್ನಗೊಳಿಸಿ ಕೀರ್ತಿಭಾಜನರಾಗಿದ್ದರು. ಬೆಂಗಳೂರಿನ ಶಂಕರಮಠದಲ್ಲಿ ವೇದಾಂತಶಾಸ್ತ್ರವನ್ನು ಅಧ್ಯಯನಮಾಡಿದವರಾಗಿದ್ದು, ಕೂಡಲಿಶೃಂಗೇರಿಮಠದ ಸ್ವಾಮಿಗಳಿಗೆ ವೇದಾಂತ ಪಾಠವನ್ನು ಹೇಳಿದ್ದರು. ಗೃಹಸ್ಥರಾಗಿದ್ದ ಅವರು ಮುಂದುಮುಂದಕ್ಕೆ ವೈರಾಗ್ಯಶೀಲರಾಗಿ

ಕ್ರಮಸನ್ಯಾಸಪದ್ಧತಿಯಂತೆ ತುರೀಯಾಶ್ರಮವನ್ನು ಸ್ವೀಕರಿಸಿದರು. ಕೆ.ಆರ್.ನಗರದ ಮಠದಲ್ಲಿ ವಾಸುದೇವಯೋಗಾನಂದರ ಅನುಚರರಾಗಿ ಶಿವಾನಂದತೀರ್ಥರೆಂಬುವವರು ಬಿಡಿಸನ್ಯಾಸಿಗಳಾಗಿ ಇದ್ದುಕೊಂಡಿದ್ದರೆಂಬುದನ್ನು ನಾವು ಮೇಲೆ ನೋಡಿದ್ದೇವೆ. ಆ ಶಿವಾನಂದತೀರ್ಥರೇ ದೊರೆಸ್ವಾಮಿಗಳಿಗೆ ಸನ್ಯಾಸದೀಕ್ಷೆಯನ್ನು ದಯಪಾಲಿಸಿ, ಗಣಪತಿ ಭಾರತಿಸ್ವಾಮಿಗಳೆಂದು ನಾಮಕರಣಮಾಡಿದರು.

ಸನ್ಯಾಸಿಗಳಾದ ತರುವಾಯ ಗಣಪತಿಭಾರತಿಸ್ವಾಮಿಗಳು ಮೈಸೂರುಜಿಲ್ಲೆಗೇ ಸೇರುವ ಕಪಿಲಾನದಿಯ ತೀರದ ನಂಜನಗೂಡು ಪಟ್ಟಣದಲ್ಲಿದ್ದುಕೊಂಡು ತಪೋಮಯ ಜೀವನವನ್ನು ನಡೆಸುತ್ತಿದ್ದರು. ಶಂಕರಾನಂದರು ಮುಕ್ತರಾದ ಬಳಿಕ ಕೆ.ಆರ್.ನಗರದ ಮಠಕ್ಕೆ ಉತ್ತರಾಧಿಕಾರಿಗಳಾರೂ ಇಲ್ಲದಿರುವುದು ನಂಜನಗೂಡಿನಲ್ಲಿಯೇ ಇದ್ದ ವೈ.ಎನ್.ಕೃಷ್ಣದೀಕ್ಷಿತ್ ಎಂಬ ಮಹನೀಯರಿಗೆ ತಿಳಿದಿತ್ತು. ಅವರು ಮಠದ ಹಿತಚಿಂತಕ ರಾಗಿದ್ದರು. ಅವರು ಕೆ.ಆರ್.ನಗರದ ಮಠದ ಕೆಲವು ಹಿತೈಷಿಗಳನ್ನು ಕೂಡಿಕೊಂಡು, ಗಣಪತಿಭಾರತಿಗಳನ್ನು ಸಂಧಿಸಿ, ಪೀಠಾಧಿಪತಿಗಳಾಗುವಂತೆ ಕೋರಿಕೊಂಡರು. ತಮ್ಮ ಪೂರ್ವಾಶ್ರಮದಿಂದಲೂ ಯೋಗಾನಂದೇಶ್ವರಸರಸ್ವತಿಮಠದ ಒಡನಾಟವು ಇದ್ದುದೇ ಕಾರಣವಾಗಿ, ಅವರು ತಮ್ಮ ಸಮ್ಮತಿಯನ್ನು ಸೂಚಿಸಿದರು. 25-6-1976ರಂದು ಅವರ ಪೀಠಾರೋಹಣವು ನೆರವೇರಿತು.

## ಮಠದಲ್ಲಿ ನಡೆದ ಪುರೋಭಿವೃದ್ಧಿಕಾರ್ಯಗಳು

ಗಣಪತಿಭಾರತಿಸ್ವಾಮಿಗಳು ವಿದ್ವನ್ಮಣಿಗಳಾಗಿದ್ದುದಲ್ಲದೆ ವ್ಯವಹಾರಕುಶಲಿಗಳೂ ಆಗಿದ್ದರು. ಅವರ ಆಡಳಿತಾವಧಿಯಲ್ಲಿ ಮಠದ ಅಭಿವೃದ್ಧಿಕಾರ್ಯಗಳು ಇತೋಪ್ಯತಿಶಯವಾಗಿ ನಡೆದುವು. ಮಠದಲ್ಲಿ ಈ ಮೊದಲೇ ಪ್ರತಿಷ್ಠಾಪನೆಗೊಂಡಿದ್ದ ಶಂಕರಾಚಾರ್ಯರು ಮತ್ತು ಶಾರದಾಂಬಾಸನ್ನಿಧಾನಗಳ ಜೊತೆಗೆ, ಸತ್ಯನಾರಾಯಣದೇವರು, ಗಣಪತಿ ಮತ್ತು ಸುಬ್ರಹ್ಮಣ್ಯದೇವರುಗಳ ಒಂದು ಆಯತನವನ್ನೂ ಜೋಡಿಸಿದರು. ಹೊಳೆನರಸೀಪುರದ ರಾಮಬ್ರಹ್ಮಾನಂದಮಠದ ಜೀರ್ಣೋದ್ಧಾರಕಾರ್ಯಗಳನ್ನು ತಕ್ಕಮಟ್ಟಿಗೆ ಮಾಡಿಸಿದರು. ರಾಮಬ್ರಹ್ಮಾನಂದರ ಅಧಿಷ್ಠಾನದಲ್ಲಿದ್ದ ಅವರ ಶಿಲಾವಿಗ್ರಹವನ್ನು ಪುನಃಪ್ರತಿಷ್ಠಾಪನೆ ಮಾಡಿಸಿದರು. ಕಾವೇರಿತೀರದ ಮೂಲಮಠವನ್ನೂ ಪರಿಷ್ಕಾರಗೊಳಿಸಿದರು. ಆ ಪರಿಷ್ಕರಣದ ಹೊತ್ತಿನಲ್ಲಿ ಶತಚಂಡೀಯಾಗವನ್ನು ನಡೆಸಿದರು.

ಕರ್ನಾಟಕಸರ್ಕಾರದ ಮುಜರಾಯಿ ಇಲಾಖೆಯ ಮಂತ್ರಿಗಳು 1979ರಲ್ಲಿ ಕೆ.ಆರ್.ನಗರದ ಮಠಕ್ಕೆ ಆಗಮಿಸಿ, ಗುರುಗಳ ದರ್ಶನ ಮತ್ತು ಮಠದ ದೇವಸನ್ನಿಧಿಗಳ ದರ್ಶನವನ್ನು ಪಡೆದು ಸುಪ್ರೀತರಾದರು. ಆ ಹೊತ್ತಿನಲ್ಲಿ ಗಣಪತಿಭಾರತಿಗಳು ಮಠದ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ 'ತಸ್ತೀಕು' ಎಂದು ಕರೆಯಲಾಗುವ ದ್ರವ್ಯಸಂಚಯವು ಮಠಕ್ಕೆ ದೊರೆಯುವಂತೆ ಮಾಡಿಕೊಡಬೇಕೆಂದು ಮಂತ್ರಿಗಳನ್ನು ಕೋರಿಕೊಂಡರು. ಮಂತ್ರಿಗಳು ಸಹಾಯಮಾಡುವ ಭರವಸೆಯಿತ್ತರು. ಅದಾದಬಳಿಕ ಗಣಪತಿಭಾರತಿ ಸ್ವಾಮಿಗಳು ಮಂತ್ರಿಗಳೊಡನೆ ಸಂಪರ್ಕದಲ್ಲಿರುತ್ತ, ಅದಕ್ಕಾಗಿ ಮೇಲಿಂದಮೇಲೆ

# ಮೊದಲನೆಯ ಅನುಬಂಧ: ಅರ್ಥಕೋಶ

ನುಡಿ = ನುಡಿಗಟ್ಟು ಇಂ = ಇಂಗ್ಲಿಷ್ ಶಬ್ದ ಹಿಂ = ಹಿಂದೀಶಬ್ದ

**ಅಂಕುರಾರ್ಪಣ (ನುಡಿ) :** ಉತ್ಸವಾಂಗವಾಗಿ ಮೊತ್ತಮೊದಲು ಧಾನ್ಯಗಳನ್ನು ಮೊಳೆಯಲು ಹಾಕುವ ಶುಭಕರ್ಮ ಎಂಬುದು ಮೂಲಾರ್ಥ. ನುಡಿಗಟ್ಟಾಗಿ ಪ್ರಾರಂಭಿಸು ಎಂದರ್ಥ

**ಅಂಗಡಿಮುಂಗಟ್ಟು :** ಅಂಗಡಿಯ ಮುಂದೆ ಕಟ್ಟಿರುವ ಕಟ್ಟಡವೇ ಮುಂಗಟ್ಟು, ಅದಕ್ಕೂ ಅಂಗಡಿ ಎಂದರ್ಥ

**ಅಂಗಾಲಕಿಚ್ಚುನೆತ್ತಿಗೇರು (ನುಡಿ) :** ಅತಿಯಾದ ಕೋಪಕ್ಕೆ ತುತ್ತಾಗುವುದು

**ಅಂಗೈಲಿಟ್ಟುಕೊಂಡು ಮುಂಗೈಲಿ ಮುಚ್ಚಿಕೋ (ನುಡಿ) :** ಚೆನ್ನಾಗಿ ಕಾಪಾಡು, ಚೆನ್ನಾಗಿ ಉಪಚರಿಸು

**ಅಂಜಲಿಬದ್ಧ :** ಕೈಮುಗಿದು ನಿಂತವನು

**ಅಜರಾಮರ :** ಮುಪ್ಪಿಲ್ಲದ, ಸಾವಿಲ್ಲದ

**ಅಂಘ್ರಿ :** ಪಾದಗಳು

**ಅಂತರ್ದೃಷ್ಟಿ :** ತನ್ನ ಒಳಗನ್ನು ತಾನೇ ಪರಿಶೀಲಿಸುವ ದೃಷ್ಟಿ

**ಅಂತರ್ವಾಣಿ :** ಮನುಷ್ಯರ ಒಳಮನಸ್ಸು ತಿಳಿಸುವ ಅಭಿಪ್ರಾಯ

**ಅಂತ್ಯಜ :** ಚಂಡಾಲ

**ಅಂತ್ಯಾಕ್ಷರಿ :** ಒಬ್ಬರು ಹೇಳಿದ ಪದ್ಯದ ಕೊನೆಯ ಅಕ್ಷರದಿಂದ ಮತ್ತೊಬ್ಬರು ಮುಂದಿನ ಪದ್ಯವನ್ನು ಆರಂಭಿಸಿ ಹೇಳುವ ಸ್ಪರ್ಧೆ

**ಅಕಿಂಚನ :** ಬಡವ

**ಅಗ್ಗಳಿಕೆ :** ಶ್ರೇಷ್ಠತೆ, ಹಿರಿಮೆ

**ಅಗಾಧ :** ಬಹುದೊಡ್ಡದಾದ

**ಅರ್ಘ್ಯಪಾದ್ಯ :** ಅರ್ಘ್ಯವೆಂದರೆ ಪೂಜ್ಯರಿಗೆ ಕೈತೊಳೆಯಲು ಕೊಡುವ ನೀರು, ಪಾದ್ಯವೆಂದರೆ ಕಾಲುತೊಳೆಯಲು ಕೊಡುವ ನೀರು

**ಅಚ್ಚಳಿಯದ :** ಸೊಗಸು ಕೆಡದ

**ಅಜೆಂಡಾ (ಇಂ) :** ಚರ್ಚಿಸಬೇಕಾದ ವಿಷಯಗಳ ಪಟ್ಟಿ

**ಅಜೇಯರು :** ಜಯಿಸಲು ಸಾಧ್ಯವಾಗದವರು

**ಅಟ್ಟಣಿಗೆ :** ಹಲಗೆ ಮುಂತಾದುವುಗಳಿಂದ ಮಾಡಿದ ಎತ್ತರವಾದ ವೇದಿಕೆ

**ಅಡರು :** ಏರಿಹೋಗು, ವ್ಯಾಪಿಸಿಕೋ

**ಅಡ್ಡಬೀಳು :** ಸಾಷ್ಟಾಂಗನಮಸ್ಕಾರಮಾಡು

**ಅಡ್ಡಾದಿಡ್ಡಿ :** ಯದ್ವಾತದ್ವಾ, ಸಿಕ್ಕಾಬಟ್ಟೆ

**ಅತ್ತಪುಲಿ ಇತ್ತದರಿ (ನುಡಿ) :** ಮುಂದಕ್ಕೆ ಹೋಗಲೂ ಆಗದ ಹಿಂದಕ್ಕೆ ಬರಲೂ ಆಗದ ಇಕ್ಕಟ್ಟಿನ ಸ್ಥಿತಿ

**ಅರ್ಥಾನುಸಂಧಾನ :** ಅರ್ಥವನ್ನು ಮನನ ಮಾಡುವುದು ಅಥವಾ ಹುಡುಕುವುದು

**ಅದ್ಯ :** ಈಗ, ಈ ದಿನ

**ಅದ್ದೂರಿ :** ಹೆಚ್ಚಿನ ವೈಭವ

**ಅಧಿಷ್ಠಾನ :** ರಕ್ಷಿಸಲ್ಪಟ್ಟ ಮಹಾತ್ಮರ ಪುಣ್ಯಸ್ಥಳ

**ಅಧಿಷ್ಠಾತ್ರಿ :** ಮುಖ್ಯಸ್ಥಳು

**ಅಧಿಷ್ಠಾನಭೂಮಿ :** ನೆಲೆಸಲು ಆಧಾರವಾದ ಭೂಮಿ

# ಎರಡನೆಯ ಅನುಬಂಧ: ವಸ್ತುಕೋಶ


ಅರ್ಕಪುಷ್ಕರಿಣಿ 1
ಅರ್ಕೇಶ್ವರಸ್ವಾಮಿ 20 1
ಅಕ್ರೂರದೇವಾಲಯ 239
ಅಕ್ಷಯವಟ 432
ಅಖಂಡಜ್ಯೋತಿ 177
ಅಖಂಡಪರಮಧಾಮ 126 147 148 161 271
ಅಖಂಡಾನಂದಾಶ್ರಮ 234
ಅಖಂಡಾನಂದಗಿರಿ 126
ಅಖಾಡಾಗಳು 319
ಅಖಾಡಾಗಳು ಮತ್ತು ಕುಂಭಮೇಳ 326
ಅಖಾಡಾಪರಂಪರೆಗಳು 320
ಅಖಿಲಭಾರತಧರ್ಮಪ್ರಚಾರಸಮಿತಿ 184
ಅಖಿಲಭಾರತೀಯಅಖಾಡಾಪರಿಷತ್ತು 325 468
ಅಖಿಲಭಾರತೀಯವಿದ್ಯಾರ್ಥಿಪರಿಷತ್ತು 422
ಅಖಿಲೇಶಾನಂದಸ್ವಾಮಿಮಹಾರಾಜ್ 88 227 386
ಅಖಿಲೇಶ್ವರಾನಂದಸರಸ್ವತಿಮಹಾರಾಜ್ 437
ಅಗಸ್ತ್ಯಮುನಿ 331 447
ಅಗಸ್ತ್ಯೇಶ್ವರಲಿಂಗ 331
ಅಗಸ್ತ್ಯೇಶ್ವರದೇವಾಲಯ 331
ಅಗ್ನಿವಸ್ತ್ರ 322
ಅಘೋರಿಗಳು 328
ಅಂಜನಾದ್ರಿ 472
ಅದಿಲಾಬಾದ್ 211
ಅದೋನಿ 13
ಅದ್ವೈತಕೋಶ 53 452
ಅಧ್ಯಾತ್ಮಪ್ರಕಾಶಕಾರ್ಯಾಲಯ 104 286
ಅಧ್ಯಾತ್ಮರಾಮಾಯಣ 5
ಅನಘಾನಂದಸ್ವಾಮಿ 422
ಅನಿಲ್‌ಕಿಂಜಾವಡೇಕರ್ 421 422
ಅನಿಲ್‌ಶರ್ಮಾ ಡಾ॥ 395
ಅನುರಾಧಾಪೌಡ್ವಾಳ್ 465
ಅನಂಗಮಂಜರಿ 252
ಅನಂತಕುಮಾರ್ 278
ಅನಂತಪದ್ಮನಾಭ 122 124 126 257 331
ಅನಂತರಾಮು. ಕೆ. ಡಾ॥ 56
ಅನಂತಶರ್ಮಾ ಭುವನಗಿರಿ ವಿದ್ವಾನ್ 45 53 56 63 66 69 70 114
ಅನ್ನಪೂರ್ಣೇಶ್ವರಿ 311 312 361 415 416
ಅನುಷ್ಠಾನಗಳು 154
ಅಪ್ಪಯ್ಯದೀಕ್ಷಿತರು 54
ಅಭಯರಾಮದಾಸಸ್ವಾಮಿ 390
ಅಭಿನವವಿದ್ಯಾತೀರ್ಥಮಹಾಸ್ವಾಮಿಗಳು 207 232 412
ಅಭಿಷೇಕ್ ಶೃಂಗೇರಿ 205
ಅಮರಪ್ರಕಾಶ್ 258 288
ಅಮರದಾಸ ಗುರುದ್ವಾರ್ 191
ಅಮಿತ್‌ಷಾ 94 110 111 116 260
ಅಮೃತವಚನ 150 151 152
ಅಮೃತಶಿಲಾಕಣಿವೆ 442
ಅಮೃತಾನಂದಸರಸ್ವತಿ 241 243
ಅಯೋಧ್ಯೆ 387 471 403 394








**2021 ಎಪ್ರಿಲ್ 7 ಮತ್ತು 8 ರಂದು ಸುರತಗಿರಿ ಆಶ್ರಮದಲ್ಲಿ ನಡೆದ ಸಂತಸಮಾವೇಶದ ದೃಶ್ಯಗಳು**




ಪೂರ್ಣಾನಂದಗಿರಿ ಆಶ್ರಮದಲ್ಲಿ ನಡೆದ ಭಾಷ್ಯಪಾರಾಯಣಾಂಜಲಿ
ಕಾರ್ಯಕ್ರಮದ ಉದ್ಘಾಟನಾ ಸಮಾರಂಭ




ದೇವ ಸಂಸ್ಕೃತಿ ವಿಶ್ವವಿದ್ಯಾಲಯ ಶಾಂತಿಕುಂಜದಲ್ಲಿ ನಡೆದ
ಕಾರ್ಯಕ್ರಮದ ಸಂದರ್ಭ




ಆಮ್ನಾಯ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಶ್ರೀಶ್ರೀ
ಅವಿಮುಕ್ತೇಶ್ವರಾನಂದ ಸರಸ್ವತೀ ಮಹಾಸ್ವಾಮಿಗಳೊಂದಿಗೆ




ಯುವ ಸಂತಸಮಾವೇಶದಲ್ಲಿ
ಪರಮಪೂಜ್ಯ ಶ್ರೀಶ್ರೀಗಳವರಿಂದ ಅನುಗ್ರಹವಚನ



ಸುರತಗಿರಿ ಆಶ್ರಮದಲ್ಲಿ ಸಾಧುಸಂತರೊಂದಿಗೆ ವಿಚಾರವಿನಿಮಯ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ
ಶ್ರೀಯುತ ಮೋಹನ್ ಭಾಗ್ವತ್ ಅವರೊಂದಿಗೆ ವಿಚಾರವಿನಿಮಯ




ಪೂಜ್ಯ ಶ್ರೀ ಸ್ವಾಮಿ ಹರಿಬ್ರಹ್ಮೇಂದ್ರಾನಂದತೀರ್ಥರು ಹಾಗೂ ಕಾರ್ಯಕರ್ತರೊಂದಿಗೆ
ಹರಿದ್ವಾರದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆ



ಹರಿದ್ವಾರಕ್ಕೆ ಆಗಮಿಸಿದ ಮಾತೆಯರು ಹಾಗೂ ಕಾರ್ಯಕರ್ತರ ಗೋಷ್ಠಿ




ಪರಮಪೂಜ್ಯ ಶ್ರೀಶ್ರೀ ಬ್ರಹ್ಮಾನಂದಭಾರತೀ ಸ್ವಾಮಿಗಳವರಿಂದ
ಸೌಂದರ್ಯಲಹರೀ ಕೇಂದ್ರಗಳಲ್ಲಿ ಅನುಗ್ರಹವಚನ



ಹರಿದ್ವಾರದಲ್ಲಿ ಪವಿತ್ರ ಶಾಹಿಸ್ನಾನ ನಡೆಯುವ ಸ್ಥಳ–ಹರ ಕೀ ಪೌಡಿ



ಹರಿದ್ವಾರದಲ್ಲಿ ಪರಮಪೂಜ್ಯ ಶ್ರೀಶ್ರೀಗಳವರೊಂದಿಗೆ ಪವಿತ್ರ ಗಂಗಾಸ್ನಾನ



ರಾಮೋತ್ಸವದ ಸಂದರ್ಭದಲ್ಲಿ ವೇದ ಹಾಗೂ ಭಾಷ್ಯಪಾರಾಯಣಗಳು

# 7. ಹೃಷೀಕೇಶ ಮತ್ತು ಉತ್ತರಕಾಶೀಯಾತ್ರೆಯ ಪುಣ್ಯಾನುಭವಗಳು



ಹೃಷೀಕೇಶದ ಆರ್ಷವಿದ್ಯಾಪೀಠದಲ್ಲಿ
ಪೂಜ್ಯ ಶ್ರೀ ಸ್ವಾಮಿ ಸಾಕ್ಷಾತ್ಕೃತಾನಂದರೊಂದಿಗೆ



ಆರ್ಷವಿದ್ಯಾಪೀಠದಲ್ಲಿ
ಪರಮಪೂಜ್ಯ ಶ್ರೀಶ್ರೀಗಳವರಿಂದ ಅನುಗ್ರಹವಚನ




ಹೃಷೀಕೇಶದ ಪರಮಾರ್ಥನಿಕೇತನದಲ್ಲಿ
ಪೂಜ್ಯ ಶ್ರೀ ಸ್ವಾಮಿ ಚಿದಾನಂದಸರಸ್ವತಿಯವರೊಂದಿಗೆ



ಹೃಷೀಕೇಶದ ಪರಮಾರ್ಥನಿಕೇತನದಲ್ಲಿ ಪವಿತ್ರ ಗಂಗಾಆರತಿಯಲ್ಲಿ
ಪೂಜ್ಯ ಶ್ರೀಶ್ರೀಗಳವರು ಭಾಗವಹಿಸಿದ್ದ ಸಂದರ್ಭ



ವಸಿಷ್ಠ ಗುಹೆ– ಹೃಷೀಕೇಶ



ಅರುಂಧತಿ ಗುಹೆ– ಹೃಷೀಕೇಶ



ವಸಿಷ್ಠಗುಹೆಯ ಸಮೀಪ ವಾಸವಾಗಿರುವ 104 ವರ್ಷದ
ಪೂಜ್ಯ ಶ್ರೀ ಚೈತನ್ಯಾನಂದಪುರಿ ಎನ್ನುವ ಯತಿವರೇಣ್ಯರ ಭೇಟಿ



ವಸಿಷ್ಠಗುಹೆಯ ಸಮೀಪ ಗಂಗಾತೀರದಲ್ಲಿ ಗಂಗಾಷ್ಟಕ ಪಾರಾಯಣ



ಹೃಷೀಕೇಶದ ಭರತದೇವಾಲಯದಲ್ಲಿ ಪೂಜ್ಯ ಶ್ರೀಶ್ರೀಗಳವರು



ವಸಿಷ್ಠಗುಹೆಯ ಸಮೀಪ ಗಂಗಾತೀರದಲ್ಲಿ ಕಾರ್ಯಕರ್ತರಿಗೆ ತೀರ್ಥಸಿಂಚನ



ಉತ್ತರಕಾಶಿಯ ರಮಣೀಯ ದೃಶ್ಯ



ಉತ್ತರಕಾಶಿಯ ಕಾಶಿವಿಶ್ವನಾಥ ದೇವಾಲಯದಲ್ಲಿ ಸ್ತೋತ್ರಪಾರಾಯಣ


# 8. ಗಂಗೆಯ ತಡಿಯಿಂದ ಕಾವೇರಿಯ ಮಡಿಲಿಗೆ



ನೈಮಿಷಾರಣ್ಯದಲ್ಲಿರುವ ಲಲಿತಾಮಂದಿರದಲ್ಲಿ ಲಲಿತಾದೇವಿಯ ದರ್ಶನ



ನೈಮಿಷಾರಣ್ಯದ ಲಲಿತಾಮಂದಿರದಲ್ಲಿರುವ
ಪುರಾತನ ಕಾಮೇಶ್ವರ–ಕಾಮೇಶ್ವರೀ ವಿಗ್ರಹ



ವಾರಾಣಸಿಯಲ್ಲಿ ಕೇದಾರೇಶ್ವರನಿಗೆ
ಉಭಯ ಶ್ರೀಗಳವರಿಂದ ಗಂಗಾಭಿಷೇಕ



ಅಯೋಧ್ಯೆಯ ಶ್ರೀರಾಮಜನ್ಮಭೂಮಿಯಲ್ಲಿ ಶ್ರೀಯುತ ಗೋಪಾಲ್‌ಜೀಯವರು ರಾಮಂದಿರದ ಮಾದರಿ ಕಲಾಕೃತಿಯನ್ನು ತೋರಿಸುತ್ತಿರುವುದು



ಅಯೋಧ್ಯೆಯಲ್ಲಿ ಪ್ರಸಿದ್ಧ ಸರಯೂ ಆರತಿಯ ಪವಿತ್ರ ಸಂದರ್ಭ



ವಾರಾಣಸಿಯಲ್ಲಿ ಸಂತಸಮಾವೇಶ ಹಾಗೂ ಸೌಂದರ್ಯಲಹರೀ ಅಭಿಯಾನವನ್ನು
ಆಯೋಜಿಸುವ ಕುರಿತು ಕಾರ್ಯಕರ್ತರೊಂದಿಗೆ ಸಮಾಲೋಚನೆ





ಜಬಲಪುರದಲ್ಲಿ ಧುವಾನ್‌ಧಾರಾ ಜಲಪಾತ ವೀಕ್ಷಣೆ ಹಾಗೂ
ಭೇದಾಘಾಟಿನಲ್ಲಿ ಬೋಟಿನಲ್ಲಿ ನರ್ಮದಾನದಿಯ ವೀಕ್ಷಣೆ

# ದ್ವಿತೀಯ ಭಾರತಯಾತ್ರೆಯ ಸಿಂಹಾವಲೋಕನ

